ಬೆಳಗಾವಿ ವರದಿ

ಕನ್ನಡ ದಿನಪತ್ರಿಕೆ

03 ಮಾರ್ಚ್ । ರವಿವಾರ

03 MARCH 2024

ಪ್ರಧಾನ ಸಂಪಾದಕ : ಸತೀಶ ಬ ಗುಡಗೆನಟ್ಟಿ

BELAGAVI VARADI KANNADA DAILY NEWS PAPER

ಗಡಿ ಜಿಲ್ಲೆಯ ಧ್ವನಿ...

₹4 ಸಂಪುಟ – 5 ಸಂಚಿಕೆ – 14 ಪುಟ – 4 RNI . KARKAN/2020/79084 ADVRT EMAIL. BELAGAVIVARADIEDITOR@GMAIL.COM NEWSBELAGAVI@GMAIL.COM 9900332089 REG.NO G-2/PMG/KA/NK/BM/139/2024-26

## ಸರ್ಕಾರ ಉರುಳಿಸಲು ನಮ್ಮ ಶಾಸಕರಿಗೆ 50 ಕೋಟಿ ರೂ. ಆಫರ್

### ಸಿಎಂ ಸಿದ್ದರಾಮಯ್ಯ ನೇರ ಆರೋಪ



ಬೆಂಗಳೂರು: ಕಾಂಗ್ರೆಸ್ ಶಾಸಕರ ಖರೀದಿಗೆ ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಮೈಸೂರಿನಲ್ಲಿ ಮಾತನಾಡಿದ ಸಿದ್ದರಾಮಯ್ಯ, ಬಿಜೆಪಿ ಪಕ್ಷ ಒಬ್ಬೊಬ್ಬರಿಗೆ 50 ಕೋಟಿ ರೂಪಾಯಿ ಆಫರ್ ಮಾಡಿದೆ. ಆದರೆ, ಕಾಂಗ್ರೆಸ್ನ ಶಾಸಕರು ಯಾರೂ ಇದಕ್ಕೆ ಬಗ್ಗಿಲ್ಲ ಎಂದಿದ್ದಾರೆ.

136 ಸ್ಥಾನವಿದ್ದರೂ ಬಿಜೆಪಿ ಸರ್ಕಾರ ಅಲ್ಲಾಡಿಸಲು ಪ್ರಯತ್ನ ಪಡುತ್ತಿದೆ. ಸರ್ಕಾರಗಳನ್ನು ಬೀಳಿಸುವುದು ಅಭ್ಯಾಸವಾಗಿ ಹೋಗಿದೆ. ನೇರವಾಗಿ ಅವರು ಯಾವತ್ತೂ ಚುನಾವಣೆ ಮಾಡಿಯೇ ಇಲ್ಲ. ದೇಶದ ಬೇರೆ ಬೇರೆ ಭಾಗಗಳಲ್ಲಿ ಸರ್ಕಾರ ಅತಂತ್ರ ಮಾಡುವ ರೀತಿ ಕರ್ನಾಟಕದಲ್ಲೂ ನಡೆದಿರುವುದು ಸತ್ಯ ಎಂದು ಬಿಜೆಪಿ ವಿರುದ್ಧ ಕಿಡಿಕಾರಿದ್ದಾರೆ.

# ಬಾಂಬ್ ಬ್ಲಾಸ್ಟ್ ಸ್ಥಳಕ್ಕೆ ಭೇಟಿ ನೀಡಿದ ಸಿಎಂ

## ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳ ಆರೋಗ್ಯ ವಿಚಾರಿಸಿದ ಸಿಎಂ



ಬೆಂಗಳೂರು: ಕುಂದಲಹಳ್ಳಿಯ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ ಸಂಭವಿಸಿದ್ದು, ಪೊಲೀಸರ ತನಿಖೆ ಚುರುಕಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಖುದ್ದು ಬಾಂಬ್ ಸ್ಫೋಟ ಸಂಭವಿಸಿದ ರಾಮೇಶ್ವರಂ ಕೆಫೆಗೆ ಭೇಟಿ ನೀಡಿ ಘಟನಾ ಸ್ಥಳದ ಪರಿಶೀಲನೆ ನಡೆಸಿದ್ದಾರೆ. ಪೊಲೀಸ್ ಅಧಿಕಾರಿಗಳಿಂದ ಸ್ಫೋಟದ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

ಅವಳಿ ಸ್ಫೋಟ ಸಂಭವಿಸಿದ ರಾಮೇಶ್ವರಂ ಕೆಫೆಯನ್ನು ಪೊಲೀಸರು ಸುತ್ತುವರಿದಿದ್ದಾರೆ. ಭದ್ರತಾ ಕೋಟೆಯಲ್ಲಿ ಬಾಂಬ್ ಸ್ಫೋಟ ಸಂಭವಿಸಿದ ಜಾಗದಲ್ಲಿ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಘಟನಾ ಸ್ಥಳವನ್ನು ಪರಿಶೀಲನೆ ನಡೆಸಿರುವ ಸಿಎಂ ಸಿದ್ದರಾಮಯ್ಯ, ಬ್ಯಾಗ್ ಇಟ್ಟು ಹೋದ ಶಂಕಿತನ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.

ರಾಮೇಶ್ವರಂ ಕೆಫೆ ಬಾಂಬ್ ಬ್ಲಾಸ್ಟ್ ಬಗ್ಗೆ ಸೋಷಿಯಲ್ ಮೀಡಿಯಾ ಫೀನಲ್ಲಿ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ. ಸ್ಫೋಟಕ ಇಟ್ಟು ಹೋಗಿದ್ದ ಆರೋಪಿಯ ಪತ್ತೆ ಹಚ್ಚುವ ಕಾರ್ಯ ಚುರುಕಾಗಿ ನಡೆದಿದೆ. ಆರೋಪಿ ಮಾಸ್ಕ್ ಮತ್ತು ಟೋಪಿ ಧರಿಸಿ ಬಸ್ಸಿನಲ್ಲಿ ಬಂದು ತಿಂಡಿ ತಿಂದು ನಂತರ ಸ್ಫೋಟಕವುಳ್ಳ ಬ್ಯಾಗ್ ಇಟ್ಟು ತೆರಳಿದ್ದಾನೆ. ಆದಷ್ಟು ಬೇಗ ಕೃತ್ಯ ಎಸಗಿದ ವ್ಯಕ್ತಿಯನ್ನು ಪತ್ತೆ ಹಚ್ಚಿ, ಬಂಧಿಸಲಾಗುವುದು. ಘಟನೆಯಲ್ಲಿ ಗಾಯಗೊಂಡಿದ್ದವರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ರಾಮೇಶ್ವರಂ ಕೆಫೆಗೆ ಭೇಟಿ ನೀಡುವ ಮುನ್ನ ಸಿಎಂ ಸಿದ್ದರಾಮಯ್ಯ ಬಾಂಬ್ ಸ್ಫೋಟದಲ್ಲಿ ಗಾಯಗೊಂಡು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ವೈದ್ಯರೊಂದಿಗೆ ಮಾತನಾಡಿ ಗಾಯಾಳುಗಳ ಚಿಕಿತ್ಸೆಯ ಮಾಹಿತಿ ಪಡೆದುಕೊಂಡಿದ್ದಾರೆ.

### ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣ

## ಶಂಕಿತ ಆರೋಪಿ ಸೇರಿ ಒಟ್ಟು ನಾಲ್ವರು ವಶಕ್ಕೆ




ಬೆಂಗಳೂರು: ಕುಂದಲಹಳ್ಳಿ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಶಂಕಿತ ಆರೋಪಿಯನ್ನು ಇಂಟೆಲಿಜೆನ್ಸ್ ತಂಡ ವಶಕ್ಕೆ ಪಡೆದಿದೆ. ಈ ಶಂಕಿತ ಸೇರಿ ಇನ್ನು ಮೂವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಸಿಸಿಟಿವಿ ದೃಶ್ಯದಲ್ಲಿ ಸೆರೆಯಾದಂತೆ ಮುಖಕ್ಕೆ ಮಾಸ್ಕ್ ಹಾಗೂ ತಲೆಗೆ ಟೋಪಿ ಹಾಕಿ ಕೊಂಡಿದ್ದ ವ್ಯಕ್ತಿಯೇ ಶಂಕಿತನೆಂದು ಪತ್ತೆ ಹಚ್ಚಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಒಟ್ಟು ನಾಲ್ವರನ್ನು ಇಂಟೆಲಿಜೆನ್ಸ್ ತಂಡ ವಶಕ್ಕೆ ಪಡೆದುಕೊಂಡಿದೆ. ಶಂಕಿತ ಆರೋಪಿಗಳು ಇದೆನ್ನೆಲ್ಲ ಏಕೆ ಮಾಡಿದ್ದಾರೆ ಎಂದು ವಿಚಾರಣೆ ನಂತರ ತಿಳಿದು ಬರಲಿದೆ.

ದೂರುದಾರ ರಾಜೇಶ್ ಅವರು ಕೆಫೆಯ ಬೆಸಿನ್ ಬಳಿ ಆರೋಪಿ ಬ್ಯಾಗ್ ಇಡೋದನ್ನ ಗಮನಿಸಿದ್ದರು. ಹೋಟೆಲ್ಗೆ ಬಂದವನೇ ಆತುರ ಆತುರವಾಗಿ 11.30ಗೆ ರವೆ ಇಡ್ಲಿ ತಿಂದು ಬ್ಯಾಗ್ ಇಟ್ಟು ಹೋಗಿದ್ದಾನೆ. ಹೀಗಾಗಿ ರಾಜೇಶ್ ಅವರೇ ಆರೋಪಿಗಳ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ. ಐಪಿಸಿ ಸೆಕ್ಷನ್ 324 ಪ್ರಕಾರ ಅಪಾಯಕಾರಿ ಆಯುಧಗಳು ಅಥವಾ ವಿಧಾನಗಳಿಂದ ಸ್ವಯಂಪ್ರೇರಣೆಯಿಂದ ಗಾಯವನ್ನು ಉಂಟುಮಾಡುವುದು. 307 ಕೊಲೆ ಯತ್ನ, 120ಃ ಕ್ರಿಮಿನಲ್ ಪಿತೂ–ರಿಯಡಿ ಕೇಸ್ ದಾಖಲಾಗಿದೆ.



## ಲಾರಿಗೆ ಬೆಂಕಿ ತಗುಲಿ ಲಕ್ಷಾಂತರ ರೂ. ಮೌಲ್ಯದ ಮೆಣಸಿನಕಾಯಿ ಭಸ್ಮ: ಕಣ್ಣೀರಿಟ್ಟ ರೈತ

ಬಳ್ಳಾರಿ: ವಿದ್ಯುತ್ ತಂತಿ ತಗುಲಿದ ಪರಿಣಾಮ ಲಾರಿಯೊಂದು ಹೊತ್ತಿ ಉರಿದ ಘಟನೆ ಕುರಗೋಡ ತಾಲ್ಲೂಕಿನ ಸಿದ್ದಮನಹಳ್ಳಿ ಹೊರವಲಯದಲ್ಲಿ ನಡೆದಿದೆ. ಲಾರಿಯಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಮೆಣಸಿನಕಾಯಿ ಬೆಂಕಿಗೆ ಆಹುತಿಯಾಗಿದ್ದು ರೈತರು ಕಂಗಾಲಾಗಿದ್ದಾರೆ.

ಸಿದ್ದಮನಹಳ್ಳಿ ಸೇರಿದಂತೆ ಅಕ್ಕಪಕ್ಕದ ರೈತರು ಬೆಳೆದ ಮೆಣಸಿನಕಾಯಿ ತುಂಬಿಕೊಂಡು ಲಾರಿ ಬೆಂಗಳೂರಿನ ಕಡೆ ಹೊರಟಿತ್ತು. ಈ ವೇಳೆ ಗ್ರಾಮದ ಹೊರವಲಯದಲ್ಲಿ ಲಾರಿಗೆ ವಿದ್ಯುತ್ ತಂತಿ ತಗುಲಿದೆ. ಪರಿಣಾಮ ಲಾರಿಗೆ ಬೆಂಕಿ ಹೊತ್ತಿಕೊಂಡಿದೆ. ಕೂಡಲೇ ಲಾರಿ ಚಾಲಕ ಹಾಗೂ ಕ್ಲೀನರ್ ಲಾರಿಯಿಂದ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ.

ಅಗ್ನಿಶಾಮಕ ದಳದ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಆಗಮಿಸಿ ಬೆಂಕಿ ಆರಿಸಿದ್ದಾರೆ. ಅಷ್ಟರಲ್ಲಾಗಲೇ ಲಾರಿ ಹಾಗೂ ಅದರಲ್ಲಿದ್ದ ಮೆಣಸಿನಕಾಯಿ ಸಂಪೂರ್ಣವಾಗಿ ಸುಟ್ಟು ಹೋಗಿದೆ.

## ತನಿಖೆ ನಡೆಸಲು ನಮ್ಮ ಪೊಲೀಸರು ಸಮರ್ಥರಿದ್ದಾರೆ: ಸಚಿವ ಡಾ.ಜಿ.ಪರಮೇಶ್ವರ್



ಬೆಂಗಳೂರು: ನಗರದ ರಾಮೇಶ್ವರಂ ಕೆಫೆಯಲ್ಲಿನ ಸ್ಫೋಟಕ ಪ್ರಕರಣವನ್ನು ತನಿಖೆ ನಡೆಸಲು ನಮ್ಮ ಪೊಲೀಸ್ ಅಧಿಕಾರಿಗಳೇ ಸಮರ್ಥರಿದ್ದಾರೆ ಎಂದು ಹೇಳುವ ಮೂಲಕ ಗೃಹಸಚಿವ ಡಾ.ಜಿ.ಪರಮೇಶ್ವರ್ ರಾಷ್ಟ್ರೀಯ ಸಂಸ್ಥೆಗಳ ತನಿಖೆಗೆ ವಹಿಸುವ ಸಾಧ್ಯತೆಯನ್ನು ತಳ್ಳಿ ಹಾಕಿದ್ದಾರೆ.

ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ರಾಜ್ಯದ ಎಫ್–ಎಸ್ಎಲ್ ಪ್ರಯೋಗಾಲಯ ಸಮರ್ಥ ಹಾಗೂ ಅತ್ಯಾಧುನಿಕವಾಗಿದೆ.

ಘಟನೆ ನಡೆದ ತಕ್ಷಣ ತಜ್ಞರ ದೊಡ್ಡ ತಂಡ ಸ್ಥಳಕ್ಕೆ ಭೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಿದೆ.

ಬಾಂಬ್ನಲ್ಲಿ ಟೈಮರ್ ಅಳವಡಿಸಿರುವುದು, ಯಾವ ರೀತಿಯ ಸ್ಫೋಟಕ ಬಳಸಲಾಗಿದೆ, ಬಾಂಬ್ ಸಾಮರ್ಥ್ಯ ಎಷ್ಟು ಎಂಬೆಲ್ಲಾ ವಿವರಗಳನ್ನೂ ಕಲೆ ಹಾಕಿಕೊಂಡಿದ್ದಾರೆ. ಇದೂ ಕೂಡ ತನಿಖೆಗೆ ಸಹಾಯವಾಗಲಿದೆ ಎಂದರು.

ಆರೋಪಿ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಬಾಂಬ್ ಸ್ಫೋಟ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಗೆ ಅನೇಕ ತಂಡಗಳನ್ನು ರಚನೆ ಮಾಡಲಾಗಿದೆ. ತನಿಖೆ ಆಳವಾಗಿ ನಡೆಯುತ್ತಿದೆ.

ಕೆಲ ಕುರುಹುಗಳು ಸಿಕ್ಕಿವೆ. ಆ ಭಾಗದ ಸಿಸಿಟಿವಿ ದೃಶ್ಯಾವಳಿಗಳನ್ನೂ ಸಂಗ್ರಹಿಸಿ ಪರಿಶೀಲಿಸುತ್ತಿದ್ದಾರೆ ಎಂದು ಹೇಳಿದರು.

ರಾಮೇಶ್ವರಂ ಕೆಫೆ ಮಾರ್ಗದಲ್ಲಿ ನಿನ್ನೆ 26 ಬಸ್ಗಳು ಸಂಚರಿಸಿವೆ. ಅವುಗಳಲ್ಲೂ ಸಿಸಿಟಿವಿ ಕ್ಯಾಮರಾ ಇದೆ. ಅದರಲ್ಲಿ ಪ್ರಯಾಣಿಕರ ದೃಶ್ಯಗಳು ಸಂಗ್ರಹವಾಗಿರುತ್ತವೆ. ಬಿಎಂಟಿಸಿ ಸಹಕಾರದೊಂದಿಗೆ ಅದನ್ನೂ ಪರಿಶೀಲಿಸಲಾಗುತ್ತಿದೆ.

ಆರೋಪಿ ಎಲ್ಲಿಂದ ಎಲ್ಲಿಗೆ ಪ್ರಯಾಣಿಸಿದ್ದಾನೆ. ಎಲ್ಲಿ ಇಳಿದಿದ್ದಾನೆ. ಬಸ್ನಲ್ಲಿ ಆತನ ನಡವಳಿಕೆ ಹೇಗಿತ್ತು. ಈ ಹಿಂದೆ ಎಲ್ಲಿಂದ ಬಂದಿದ್ದನು ಎಂಬೆಲ್ಲಾ ಮಾಹಿತಿಗಳನ್ನು ಪತ್ತೆ ಹಚ್ಚಲು ಪೊಲೀಸರು ಕ್ರಮ ಕೈಗೊಂಡಿದ್ದಾರೆ ಎಂದರು.

## ಎಸ್.ಟಿ. ಸೋಮಶೇಖರ್, ಶಿವರಾಮ ಹೆಬ್ಬಾರ್ ಗೆ ಬಿಜೆಪಿ ಶೋಕಾಸ್ ನೋಟಿಸ್



ಬೆಂಗಳೂರು: ಇತ್ತೀಚಿಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಯಶವಂತಪುರದ ಶಾಸಕ ಎಸ್.ಟಿ. ಸೋಮಶೇಖರ್ ಹಾಗೂ ಮತದಾನದಿಂದ ದೂರ ಉಳಿದ ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ್ ಅವರಿಗೆ ಬಿಜೆಪಿ ಮುಖ್ಯ ಸಚೇತಕರು ಶೋಕಾಸ್ ನೋಟಿಸ್ ನೀಡಿದ್ದಾರೆ.

ಫೆ. 27 ರಂದು ನಡೆದ ಚುನಾವಣೆಯಲ್ಲಿ ಎಸ್ ಟಿ ಸೋಮಶೇಖರ್ ಬಿಜೆಪಿ ಪಕ್ಷದ ವಿಪ್ ಉಲ್ಲಂಘಿಸಿ ಕಾಂಗ್ರೆಸ್ ಅಭ್ಯರ್ಥಿ ಅಜಯ್ ಮಾಕೇನ್ ಗೆ ಅಡ್ಡ ಮತದಾನ ಮಾಡಿದ ನಂತರ ಕಾಂಗ್ರೆಸ್ ಮೂರು ರಾಜ್ಯಸಭಾ ಸ್ಥಾನಗಳನ್ನು ಗೆದ್ದುಕೊಂಡರೆ, ಬಿಜೆಪಿ ಕೇವಲ ಒಂದು ಸ್ಥಾನ ಗಳಿಸಿತ್ತು. ಇದು ಕೇಸರಿ ಪಕ್ಷಕ್ಕೆ ದೊಡ್ಡ ಹಿನ್ನಡೆಯುಂಟುಮಾಡಿತ್ತು.

ಕೆಲ ತಿಂಗಳುಗಳಿಂದ ಪಕ್ಷದ ನಾಯಕತ್ವದೊಂದಿಗೆ ಅಸಮಾಧಾನ ಹೊಂದಿದ್ದ ಎಸ್. ಟಿ. ಸೋಮಶೇಖರ್ ಹಾಗೂ ಶಿವರಾಮ ಹೆಬ್ಬಾರ್, ಕಾಂಗ್ರೆಸ್ ನೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ. ಈ ಇಬ್ಬರೂ ಶಾಸಕರು 2019ರಲ್ಲಿ ಇತರ 15 ಮಂದಿಯೊಂದಿಗೆ ಬಿಜೆಪಿ ಸೇರ್ಪಡೆಯಾಗುವ ಮೂಲಕ ಕಾಂಗ್ರೆಸ್ – ಜೆಡಿಎಸ್ ಮೈತ್ರಿ ಸರ್ಕಾರದ ಪತನಕ್ಕೆ ಕಾರಣರಾಗಿದ್ದರು.

ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ನಿಂದ ಅಜಯ್ ಮಾಕೇನ್, ನಾಸೀರ್ ಹುಸ್ಸೈನ್ ಮತ್ತು ಜಿಸಿ ಚಂದ್ರಶೇಖರ್, ಬಿಜೆಪಿಯ ನಾರಾಯಣ ಬಾಡಂಗೆ ಗೆಲುವು ಸಾಧಿಸಿದರೆ, ಜೆಡಿಎಸ್ ನಿಂದ ಸ್ಪರ್ಧಿಸಿದ್ದ ಡಿ ಕುಪೇಂದ್ರ ರೆಡ್ಡಿ ಸೋಲನ್ನುಭವಿಸಿದರು.

## ಜಾತಿ ಗಣತಿ ವರದಿ ಅವೈಜ್ಞಾನಿಕ: ಡಾ.ಪ್ರಭಾಕರ ಕೋರೆ



ಬೆಳಗಾವಿ: ಸರ್ಕಾರ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಪಡೆದಿರುವ ಜಾತಿ ವರದಿ ದತ್ತಾಂಶವು ಅವೈಜ್ಞಾನಿಕವಾಗಿದೆ. ವೀರಶೈವ ಲಿಂಗಾಯತ ಸಮುದಾಯವು ಇದನ್ನು ತೀವ್ರವಾಗಿ ಖಂಡಿಸುತ್ತದೆ ಎಂದು ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ರಾಷ್ಠಿಥಯ ಉಪಾಧ್ಯಕ್ಷರಾದ ಡಾ.ಪ್ರಭಾಕರ ಕೋರೆಯವರು ತೀವ್ರವಾಗಿ ಖಂಡಿಸಿದ್ದಾರೆ. ಜಾತಿಯ ಸಂದರ್ಭದಲ್ಲಿ ರಾಜಕೀಯವನ್ನು ಮಾಡಬಾರದು ನೈಜವಾದ ವರದಿಯಾಗಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಈ ವರದಿಯು ಪಾರದರ್ಶಕವೆನಿಸುವುದಿಲ್ಲ. ವರದಿಯು ಸಾರ್ವಜನಿಕವಾಗಿ ಚರ್ಚೆಯಾಗಬೇಕು. ಸರಿಯಾದ ಅಂಕೆಅಂಶಗಳನ್ನು ಸಂಗ್ರಹಿಸಿ ವರದಿ ರೂಪಿಸಬೇಕು.

ಸರಿಯಾಗಿ ಯಾರಿಗೂ ಭೇಟಿಯಾಗದೆ ತರಾತುರಿಯಲ್ಲಿ ಮಾಡಿರುವುದನ್ನು ನಮ್ಮ ಸಮಾಜವು ಒಪ್ಪಲಾರದು. ಸರ್ಕಾರವು ಬದ್ಧತೆ ಹಾಗೂ ಪ್ರಾಮಾಣಿಕವಾಗಿ ಇದನ್ನು ರೂಪಿಸಲಿ. ಮತ್ತೊಮ್ಮೆ ಅಮೂಲಾಗ್ರವಾಗಿ ಪರಾಮರ್ಶಿಸಬೇಕು. ಇದನ್ನು ನಮ್ಮ ಸಮಾಜ ಒಕ್ಕೊರಿಲಿನಿಂದ ವಿರೋಧಿಸುತ್ತದೆ ಎಂದು ಹೇಳಿದ್ದಾರೆ. ಮಹಾಸಭೆ ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷೆ ರತ್ನಪ್ರಭಾ ಬೆಲ್ಲದ ಹಾಗೂ ಪದಾಧಿಕಾರಿಗಳು ಈ ವರದಿಯನ್ನು ವಿರೋಧಿಸಿದ್ದಾರೆ.

## ಕೃಷಿ ಇಲಾಖೆಯಲ್ಲಿ 750 ಹುದ್ದೆಗಳ ಭರ್ತಿಗೆ ಕ್ರಮ: ಚೆಲುವರಾಯಸ್ವಾಮಿ



ಬೆಂಗಳೂರು: ಕೃಷಿ ಇಲಾಖೆಯಲ್ಲಿ ಖಾಲಿ ಇರುವ 100 ಕೃಷಿ ಅಧಿಕಾ–ರಿಗಳು, 680 ಸಹಾಯಕ ಕೃಷಿ ಅಧಿಕಾರಿಗಳು ಸೇರಿದಂತೆ 750 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 10 ತಿಂಗಳ ಅವಧಿಯಲ್ಲಿ ಮಾಡಿರುವ ಸಾಧನೆಗಳ ಕುರಿತು ಅಂಕಿಅಂಶಗಳ ಸಮೇತ ಮಾಹಿತಿ ನೀಡಿದರು.

ಆರ್ಥಿಕ ಇಲಾಖೆ ಈ ಹುದ್ದೆಗಳ ನೇಮಕಾತಿಗೆ ಒಪ್ಪಿಗೆ ನೀಡಿದ್ದು ಇನ್ನು ಒಂದು ವಾರದಲ್ಲಿ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಲೋಕಸೇವಾ ಆಯೋಗಕ್ಕೆ ಕಳುಹಿಸಲಾಗುವುದು.

ಮೊದಲ ಹಂತದಲ್ಲಿ ಈ ಹುದ್ದೆಗಳ ನೇಮಕಾತಿ ಆಗುತ್ತಿದ್ದು, ಇನ್ನೆರಡುಮೂರು ವರ್ಷದಲ್ಲಿ ಖಾಲಿ ಇರುವ ಸುಮಾರು 2700 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಸುಮಾರು 20 ವರ್ಷದಿಂದ ಬಾಕಿ ಉಳಿದಿದ್ದ ಮುಂಬಡ್ತಿಯನ್ನು ನೀಡಲಾಗಿದೆ. 292 ಸಹಾಯಕ ಕೃಷಿ ನಿರ್ದೇಶಕರು, 253 ಕೃಷಿ ಅಧಿಕಾರಿಗಳು, 33 ಸಿಬ್ಬಂದಿ ಸೇ–ರಿದಂತೆ ಒಟ್ಟು 582 ಮಂದಿಗೆ ಮುಂಬಡ್ತಿ ನೀಡಲಾಗಿದೆ ಎಂದು ಹೇಳಿದರು.

ಐದು ವರ್ಷದಿಂದ ನಿಲ್ಲಿಸಲಾಗಿದ್ದ ಕೃಷಿ ಭಾಗ್ಯ ಯೋಜನೆಯನ್ನು ಆರಂಭಿಸಲಾಗಿದ್ದು, 10 ಸಾವಿರ ಕೃಷಿ ಹೊಂಡಗಳನ್ನು ನಿರ್ಮಿಸಲಾಗುತ್ತಿದೆ. ಕೃಷಿ ಯಾಂತ್ರಿಕತೆಯಲ್ಲಿ ಪ್ರೋತ್ಸಾಹ ನೀಡಲು 63 ಸಾವಿರ ಫಲಾನುಭವಿಗಳಿಗೆ 284.92 ಕೋಟಿ ರೂ. ಸಹಾಯಧನ ನೀಡಲಾಗಿದೆ. 2.34 ಲಕ್ಷ ಫಲಾನುಭವಿಗಳಿಗೆ ಸೂಕ್ಷ್ಮ ನೀರಾವರಿ ಘಟಕ ಅಳವಡಿಕೆ 484 ಕೋಟಿ ರೂ. ಸಹಾಯಧನ ನೀಡಲಾಗಿದೆ ಎಂದು ತಿಳಿಸಿದರು.

ರೈತ ಕರೆ ಕೇಂದ್ರದಲ್ಲಿ ಏಕರೂಪ ಸಂಖ್ಯೆಯನ್ನು ಸ್ಥಾಪಿಸಲಾಗಿದೆ. ತೊಗರಿ ಬೇಳೆಯ ನಶೆರೋಗಕ್ಕೆ ಪರಿಹಾರವಾಗಿ 2.98 ಲಕ್ಷ ರೈತರಿಗೆ 223 ಕೋಟಿ ರೂ. ಪರಿಹಾರ ನೀಡಿದ್ದು, ಕೆ–ಕಿಸಾನ್ ತಂತ್ರಾಂಶದಲ್ಲಿ ಕ್ಯೂಆರ್ ಕೋಡ್ ಅಳವಡಿಸಲಾಗಿದ್ದು, ನಕಲಿ ಆಗುವುದನ್ನು ತಪ್ಪಿಸಲಾಗಿದೆ ಎಂದು ಹೇಳಿದರು. ಈ ವರ್ಷ ಬಿತ್ತನೆ ಬೀಜ ಹಾಗೂ ರಸಗೊಬ್ಬರ ವಿಚಾರದಲ್ಲಿ ಯಾವುದೇ ಸಮಸ್ಯೆಯಾಗಿಲ್ಲ. ಮುಂದಿನ ವರ್ಷವೂ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಗೋಷ್ಠಿಯಲ್ಲಿ ಕೃಷಿ ಇಲಾಖೆ ಕಾರ್ಯದರ್ಶಿ ಅನ್ಬುಕುಮಾರ್, ಆಯುಕ್ತ ವೈ.ಎಸ್.ಪಾಟೀಲ್, ನಿರ್ದೇಶಕ ಡಾ.ಪುತ್ರ, ಜಲಾನಯನ ಅಭಿವೃದ್ಧಿ ಆಯುಕ್ತ ಗಿರೀಶ್, ನಿರ್ದೇಶಕ ಶ್ರೀನಿವಾಸ್, ಕೆಫೆಕ್ ವ್ಯವಸ್ಥಾಪಕ ನಿರ್ದೇಶಕ ಪಂಥ–'ನಾಳ್ ಉಪಸ್ಥಿತರಿದ್ದರು.

## ಪತ್ನಿ ಗೀತಾ ಸಂಸದೆಯಾದರೆ ಸಂತೋಷ: ನಟ ಶಿವರಾಜಕುಮಾರ್



ಶಿವಮೊಗ್ಗ: ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ಕೊಟ್ಟರೆ ನನ್ನ ಪತ್ನಿ ಗೀತಾ ಅವರನ್ನು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸದಸ್ಯೆ ಆಗಿ ನೋಡುವ ಆಸೆ ಇದೆ ಎಂದು ನಟ ಶಿವ ರಾಜಕುಮಾರ್ ಹೇಳಿದ್ದಾರೆ.

ನಗರದ ಕಲ್ಲಹಳ್ಳಿಯಲ್ಲಿ ಸಚಿವ ಮಧು ಬಂಗಾರಪ್ಪ ಅವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಸುದ್ದಿಗಾರರ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದ ಅವರು, ಗೀತಾ ಎಂಪಿ ಆಗುವ ಮೂಲಕ ಇತರೆ ಮಹಿಳೆಯರಿಗೆ ಮಾದರಿಯಾಗಲಿದ್ದಾರೆ ಎಂದರು.

ನಾನು ರಾಜಕೀಯಕ್ಕೆ ಬರೊಲ್ಲ. ಅದರ ಬಗ್ಗೆ ಆಸಕ್ತಿ ಇಲ್ಲ. ರಾಜಕೀಯದಲ್ಲಿದ್ದುಕೊಂಡು ಜನರ ಸೇವೆ ಮಾಡೋದು ಗೊತ್ತಿಲ್ಲ. ಕಷ್ಟ ಅಂತ ಬಂದವರಿಗೆ ಹಣ ಕೊಟ್ಟು ಕಳುಹಿಸುವೆ. ಆದ–'ರೆ ರಾಜಕಾರಣ ಗೊತ್ತಿಲ್ಲ. ಆದರೆ ಗೀತಾ ಅದೇ ಕುಟುಂಬದಿಂದ ಬಂದವರು. ರಾಜಕೀಯ ಅವ–ರಿಗೆ ರಕ್ತದಲ್ಲಿ ಬಂದಿದೆ. ಅವರು ಎಂಪಿ ಆಗಿ ಆಯ್ಕೆಯಾದರೆ ಸಂತೋಷ ಎಂದರು.

ತಮ್ಮ ಮುಂದಿನ ಚಿತ್ರ 'ಕರಟಕ ಧಮನಕ'ದ ಕಥೆ ಚೆನ್ನಾಗಿದೆ. ಬೇರೆ ಹೆಸರು ಇಡಬಹುದಿತ್ತು. ಆದರೆ ಕಥೆಗಾಗಿ ಅದೇ ಸಿನಿಮಾ ಟೈಟಲ್ ಉಳಿಸಿಕೊಳ್ಳಲಾಗಿದೆ ಎಂದರು.

## ಥಾಣೆ: ಧಾರ್ಮಿಕ ಕ್ರಿಯೆಗಳ ನೆಪದಲ್ಲಿ ಸೆಕ್ಸ್ ದಂಧೆ ನಡೆಸುತ್ತಿದ್ದ ಸ್ವಯಂಘೋಷಿತ ದೇವಮಾನವನ

ಬಂಧನ ಥಾಣೆ: ಶ್ರೀಮಂತರಾಗಲು ಬಯಸುವ ಜನರಿಗೆ ಧಾರ್ಮಿಕ ಕ್ರಿಯೆಗಳನ್ನು ನಡೆಸುವ ನೆಪದಲ್ಲಿ ಸೆಕ್ಸ್ ದಂಧೆ ನಡೆಸುತ್ತಿದ್ದ ಆರೋಪದ ಮೇಲೆ ಸ್ವಯಂ ಘೋಷಿತ ದೇವಮಾನವ ಸೇರಿದಂತೆ ಏಳು ಜನರನ್ನು ಬಂಧಿಸಲಾಗಿದೆ ಎಂದು ಥಾಣೆ ಅಪರಾಧ ವಿಭಾಗದ ಪೊಲೀಸರು ಶನಿವಾರ ತಿಳಿಸಿದ್ದಾರೆ.

ರಾಬೋಡಿಯಿಂದ 15 ವರ್ಷದ ಬಾಲಕಿ ನಾಪತ್ತೆಯಾದ ನಂತರ ದಾಖಲಾದ ಅಪಹರಣ ಪ್ರಕರಣದ ತನಿಖೆಯ ವೇಳೆ ಈ ಸೆಕ್ಸ್ ದಂಧೆ ಬಯಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ತನಿಖೆಯ ವೇಳೆ ಫೆಬ್ರವರಿ 25 ರಂದು ಅಸ್ಲಂ ಖಾನ್ ಮತ್ತು ಸಲೀಂ ಶೇಖ್ ಎಂದು ಗುರುತಿಸಲಾದ ಇಬ್ಬರನ್ನು ಬಂಧಿಸಲಾಗಿತ್ತು.

ಕೆಲ ಸಮಯದ ನಂತರ ಆರೋಪಿಗಳ ನೀಡಿದ ಮಾಹಿತಿ ಆಧರಿಸಿ ಪ್ರಮುಖ ಆರೋಪಿ ಸಾಹೇಬ್ ಲಾಲ್ ವಜೀರ್ ಶೇಖ್ ಅಲಿಯಾಸ್ ಯೂಸುಫ್ ಬಾಬಾ ನನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದ್ದಾರೆ.

## ಯುವತಿ ಮೇಲೆ ಅತ್ಯಾಚಾರ ಎಸಗಿ ಪರಾ–ರಿಯಾಗಿದ್ದ ಆರೋಪಿ ಆಟೋ ಚಾಲಕನ ಬಂಧನ



ಬೆಂಗಳೂರು: ನಿರ್ಜನ ಪ್ರದೇಶದ ಕಟ್ಟಡವೊಂದಕ್ಕೆ ಕರೆದೊಯ್ದು ಯುವತಿ ಮೇಲೆ ಅತ್ಯಾಚಾರ ಎಸಗಿ ಮಹಡಿಯಿಂದ ಕೆಳಗೆ ತಳ್ಳಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಖತರ್ನಾಕ್ ಆಟೋ ಚಾಲಕನನ್ನು ಬಂದಿಸುವಲ್ಲಿ ಸಂಪಂಗಿರಾಮನಗರ ಪೊಲೀಸರು ಯಶಸ್ವಿಯಾಗಿದ್ದಾರೆ. ನಗರದ ನಿವಾಸಿ, ಆಟೋ ಚಾಲಕ ಮುಬಾರಕ್ (38) ಬಂಧಿತ ಆರೋಪಿ.

ಕೆಲ ದಿನಗಳ ಹಿಂದೆ ಸಂಪಂಗಿರಾಮನಗರ ಪೊಲೀಸ್ ಠಾಣೆ ವ್ಯಾಪ್ತಿಯ ಕೆಎಚ್ ರಸ್ತೆಯಲ್ಲಿನ ನಿವೇಶನದ ಬಹುಮಹಡಿ ಕಟ್ಟಡದ ಕೆಳಗೆ ಬಿದ್ದಿದ್ದ ಯುವತಿಯ ಶವ ಕುರಿತಂತೆ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿರುತ್ತಾರೆ. ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದಾಗ ಆಕೆಯ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿರುವುದಾಗಿ ವರದಿ ಬಂದಿರುತ್ತದೆ. ವರದಿಯನ್ನಾಧರಿಸಿ ತನಿಖೆ ಕೈಗೊಂಡ ಪೊಲೀಸರು ಸಿಕ್ಕ ಮಾಹಿತಿ ಮೇರೆಗೆ ಆಟೋ ಚಾಲಕ ಮುಬಾರಕ್ನನ್ನು ಬಂದಿಸಿ ತೀವ್ರ ವಿಚಾರಣೆಗೊಳಪಡಿಸುತ್ತಾರೆ.

# ಕಣಬರ್ಗಿ ವಸತಿ ವಿನ್ಯಾಸಕ್ಕೆ 50 ಕೋಟಿ ಮೀಸಲು

## ಬುಡಾ: 384.46 ಕೋಟಿ ರೂಪಾಯಿ ಬಜೆಟ್ ಗೆ ಅನಮೋದನೆ



ಬೆಳಗಾವಿ: ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ(ಬುಡಾ)ದ 2024–25 ನೇ ಸಾಲಿನಲ್ಲಿ 384.46 ಕೋಟಿ ರೂಪಾಯಿ ಆಯವ್ಯಯಕ್ಕೆ ಅನುಮೋದನೆ ನೀಡಲಾಗಿದೆ.

ಶುಕ್ರವಾರ ನಡೆದ ಪ್ರಾಧಿಕಾರದ ಸಾಮಾನ್ಯ ಸಭೆ ಹಾಗೂ ಆಯವ್ಯಯ ಸಭೆಯಲ್ಲಿ ಬಜೆಟ್ ಗೆ ಅನುಮೋದನೆ ಪಡೆಯಲಾಯಿತು.

ಸದರಿ ಬಜೆಟ್ ನಲ್ಲಿ ಕಣಬರ್ಗಿ ಯೋಜನೆ (ಯೋಜನಾ ಸಂಖ್ಯೆ 61) ಕೈಗೋಳ್ಳಲು ಪ್ರಸ್ತುತ ಆರ್ಥಿಕ ವರ್ಷ (2024–2025) ರೂ.5000 ಲಕ್ಷಗಳನ್ನು ಮೀಸಲಿಡಲಾಗಿದೆ.

ಹೊಸ ವಸತಿ ವಿನ್ಯಾಸ ಅಭಿವೃದ್ಧಿ ಯೋಜನೆಗೆ ರೂ.3000 ಲಕ್ಷಗಳನ್ನು ಹಮ್ಮಿಕೊಳ್ಳಲಾಗಿದೆ. ಮಹಾ ಯೋಜನೆಯ ರಸ್ತೆಗಳು ಮತ್ತು ಸಂಚಾರಿ ವರ್ತುಲ ಅಭಿವೃದ್ಧಿ ಕಾಮಾಗಾರಿಗೆ ರೂ.5000 ಲಕ್ಷ ಮೀಸಲಿಡಲಾಗಿದೆ.

ಪ್ರಾಧಿಕಾರದ ಯೋಜನೆಯಲ್ಲಿನ ವಾಣಿಜ್ಯ ಸಂಕೀರ್ಣಗಳ ನಿರ್ಮಾಣ–ಕ್ಕಾಗಿ ರೂ.3500 ಲಕ್ಷಗಳು; ನಗರದಲ್ಲಿನ ವಿವಿಧ ಉದ್ಯಾನವನಗಳ ಅಭಿವೃದ್ಧಿಗಾಗಿ ರೂ.1500 ಲಕ್ಷಗಳು; ಮುಖ್ಯ ಕೆರೆಗಳ ಅಭಿವೃದ್ಧಿಗಾಗಿ ರೂ.1500 ಲಕ್ಷಗಳನ್ನು ಹಾಗೂ ನಗರ ವ್ಯಾಪ್ತಿಯ ಎಲ್ಲಾ ಕೆರೆಗಳಿಗೆ ಬೆಲಿ ಹಾಕುವ ಕಾಮಗಾ–ರಿಗಳಿಗೆ ರೂ.500 ಲಕ್ಷಗಳನ್ನು ತೆಗೆದಿ–ರಿಸಲಾಗಿದೆ.

ಅದೇ ರೀತಿ ನಗರದ ವಿವಿಧ ಪ್ರಮುಖ ಜಾಗೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲು ರೂ.50 ಲಕ್ಷಗಳು ಹಾಗೂ ಸಂಚಾರಿ ಸಿಸಿ ಕ್ಯಾಮರಾ ಅಳವಡಿಸಲು ರೂ.50 ಲಕ್ಷಗಳು; ನಗರ ಸೌಂದರೀಕರಣಕ್ಕಾಗಿ ರೂ.500 ಲಕ್ಷಗಳು ಹಾಗೂ ಕಣಬರ್ಗಿ ವಸತಿ ವಿನ್ಯಾಸ ಅಭಿವೃದ್ಧಿ ಯೋಜನೆ ಸಂಖ್ಯೆ:61 ಯನ್ನು ಶೀಘ್ರವಾಗಿ ಪ್ರಾರಂಭಿಸಲು ತಿರ್ಮಾನಿಸಲಾಗಿರುತ್ತದೆ.

ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ, ಶಾಸಕರಾದ ಆಸಿಫ್(ರಾಜು) ಸೇಠ್, ಅಭಯ್ ಪಾಟೀಲ, ಜಿಲ್ಲಾಧಿಕಾರಿ ನಿತೇಶ್ ಪಾಟೀಲ, ಬುಡಾ ಆಯುಕ್ತರಾದ ಶಕೀಲ್ ಅಹ್ಮದ್ ಮತ್ತಿತರರು ಉಪಸ್ಥಿತ–ರಿದ್ದರು.

## ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ; ಮೂಲ ದಾಖಲೆ ಪರಿಶೀಲನೆ

ಬೆಳಗಾವಿ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಮತ್ತು ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಮೂಲ ದಾಖಲೆ / ದೈಹಿಕ ಅರ್ಹತೆ ಪರಿಶೀಲನೆಯನ್ನು ಮಾ.07 ರಿಂದ ಪ್ರಾದೇಶಿಕ ತರಬೇತಿ ಕೇಂದ್ರ, ಗೋಕುಲ ರಸ್ತೆ, ಹುಬ್ಬಳ್ಳಿಯಲ್ಲಿ ಪ್ರಾರಂಭಿಸಲು ಯೋಜಿಸಲಾಗಿದ್ದು, ಅಭ್ಯರ್ಥಿಗಳ ಮೂಲ ದಾಖಲೆ ಹಾಗೂ ದೈಹಿಕ ಅರ್ಹತೆ ಪರಿಶೀಲನೆಗೆ ಹಾಜರಾಗಬೇಕಾದ ದಿನಾಂಕ / ಸಮಯ ಹಾಗೂ ಹಾಜರು ಪಡಿಸಬೇಕಾದ ಮೂಲ ದಾಖಲೆಗಳ ವಿವರ ವಿಳಾಸ www.nwkrtc.karnataka.gov.in ವೆಬ್‌ಸೈಟ್‌ನ್ನು ನಿರಂತರವಾಗಿ ಗಮನಿಸಲು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಡುಗೆ ಅನಿಲ ಸಂಪರ್ಕ ನೀಡಲು ಅರ್ಜಿ ಆಹ್ವಾನ

ಶಿವಮೊಗ್ಗ: ಸೊರಬ ಪುರಸಭೆಯ 2023-24 ನೇ ಸಾಲಿನ ಶೇ.24.10 ಪರಿಶಿಷ್ಟ ಜಾತಿ(ಎಸ್ಸಿಪಿ) ಅನುದಾನದಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ(ಟಿಎಸ್ಪಿ) ಅನುದಾನದಡಿ ಅಡುಗೆ ಅನಿಲ ಸಂಪರ್ಕ ನೀಡಲು, ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ಹಾಗೂ ಶೇ.5 ರ ವಿಕಲಚೇತನರ ಯೋಜನೆಯಡಿ ಅಂಗವಿಕಲರ ಉಪಯೋಗಕ್ಕೆ ಅಡುಗೆ ಅನಿಲ ಸಂಪರ್ಕ ಕಲ್ಪಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪುರಸಭೆ ಕಚೇರಿಯಿಂದ ಅರ್ಜಿ ಪಡೆದು ಮಾ.07 ರೊಳಗೆ ನಿಗದಿತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು ಎಂದು ಸೊರಬ ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

## ಮಹಿಳೆ ಕಾಣೆ



ಶಿವಮೊಗ್ಗ: ಶೀತಲ್ ಅಲಿಯಾಸ್ ನಮಿತಾ, 29 ವರ್ಷಗಳು ಇವರು ಲಷ್ಕರ್ ಮೊಹಲ್ಲಾದಿಂದ 2022 ರ ಮೇ 13 ರಂದು ಕಾಣೆಯಾಗಿರುತ್ತಾರೆ.

ಕಾಣೆಯಾದ ಶೀತಲ್ ರೂ.6 ಲಕ್ಷ ಹಣದ ಬ್ಯಾಗಿನೊಂದಿಗೆ ತಮ್ಮ ಪತಿಯೊಂದಿಗೆ ಲಷ್ಕರ್ ಮೊಹಲ್ಲಾಗೆ ಹೋಗಿದ್ದು, ಪತಿ ಕೋಳಿ ಫಾರಂ ಮಾಲೀಕರಿಗೆ ಹಣ ಕೊಟ್ಟು ಬರೋಣವೆಂದು ಕರೆದಾಗ ಇಲ್ಲೇ ತರಕಾರಿ ತೆಗೆದುಕೊಳ್ಳುತ್ತೇನೆ ಎಂದು ಹೇಳಿರುತ್ತಾರೆ. ಪತಿ ಕೋಳಿ ಫಾರಂ ಮಾಲೀಕರಿಗೆ ಹಣ ನೀಡಲು ತೆರಳಿದಾಗ ರೂ.2.5 ಲಕ್ಷ ಕಡಿಮೆ ಇರುವುದು ಕಂಡು ಬಂದು ಪತ್ನಿಗೆ ಕರೆ ಮಾಡಿದಾಗ ಹಣ ಕಳೆದುಹೋಗಿದೆ ಇಲ್ಲೇ ಮಾರ್ಕೆಟ್ನಲ್ಲಿ ಹುಡುಕುತ್ತಿದ್ದೇನೆ ಎಂದು ಹೇಳಿರುತ್ತಾರೆ. ನಂತರ ಶೀತಲ್ರ ಮೊಬೈಲ್ ಸ್ವಿಚ್‌ಆಫ್ ಆಗಿರುತ್ತದೆ. ಎಲ್ಲ ಕಡೆ ಹುಡುಕಿದರು ಅವರು ಸಿಕ್ಕಿರುವುದಿಲ್ಲ.

ಕಾಣೆಯಾದ ಶೀತಲ್ ಸಾಧಾರಣ ಮೈಕಟ್ಟು, ಕೋಲು ಮುಖ, 5.2 ಅಡಿ ಎತ್ತರ, ಎಣ್ಣೆಗೆಂಪು ಬಣ್ಣ, ತಲೆಯಲ್ಲಿ ಕಪ್ಪು ಕೂದಲು ಇರುತ್ತದೆ. ಕನ್ನಡ, ಇಂಗ್ಲಿಷ್, ಹಿಂದಿ ಭಾಷೆ ಮಾತನಾಡುತ್ತಾರೆ. ಈಕೆ ಯಾರಿಗಾದರೂ ಪತ್ತೆಯಾದಲ್ಲಿ ಕೋಟೆ ಪೊಲೀಸ್ ಠಾಣೆ, ದೂ.ಸಂ: 08182261415 ನ್ನು ಸಂಪರ್ಕಿಸಬಹುದೆಂದು ಕೋಟೆ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

## ಜಿಲ್ಲಾಧಿಕಾರಿಗಳ ಕಚೇರಿ ಕಾನೂನು ಕೋಶ

**ಗುತ್ತಿಗೆ ಆಧಾರದ ಮೇಲೆ ನೆಮಕಾತಿಗಾಗಿ ನಿವೃತ್ತ ಜಿಲ್ಲಾ ನ್ಯಾಯಾಧೀಶ, ನಿವೃತ್ತ; ಹಿರಿಯ ಸಿವಿಲ್ ನ್ಯಾಯಾಧೀಶರಿಂದ ಅರ್ಜಿ ಆಹ್ವಾನ**

ಧಾರವಾಡ: ಧಾರವಾಡ ಜಿಲ್ಲಾ ಕಂದಾಯ ಇಲಾಖೆಯಲ್ಲಿ ಭೂಸ್ವಾಧೀನ ಹಾಗೂ ಇತರೆ ಎಲ್ಲ ತರಹದ ವ್ಯಾಜ್ಯ ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಕಾನೂನಿನ ಸಲಹೆಗಳನ್ನು ನೀಡಲು ಜಿಲ್ಲಾಧಿಕಾರಿಗಳ ಕಚೇರಿಯ ಕಾನೂನು ಕೋಶಕ್ಕೆ ಒರ್ವ ಕಾನೂನು ಸಲಹೆಗಾರರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅಥವಾ ನಿವೃತ್ತ ಹಿರಿಯ ಸಿವಿಲ್ ನ್ಯಾಯಾಧೀಶರನ್ನು ಗುತ್ತಿಗೆ ಆಧಾರದಲ್ಲಿ ಮಾಸಿಕ ಸಂಚಿತ ವೇತನವನ್ನು ನೀಡುವ ಷರತ್ತಿಗೊಳಪಡಿಸಿ, ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅಥವಾ ನಿವೃತ್ತ ಹಿರಿಯ ಸಿವಿಲ್ ನ್ಯಾಯಾಧೀಶರು ಮಾರ್ಚ್ 7, 2024ರೊಳಗಾಗಿ ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸರಣಿ ಪರೀಕ್ಷೆ: ಶಾಲೆಯ ಹೆಗ್ಗಳಿಕೆಯಲ್ಲ

ಜಿಲ್ಲಾ ಹಂತದ್ದೊ, ರಾಜ್ಯ ಮಟ್ಟದ್ದೊ ಆಟದ ಪಂದ್ಯಾವಳಿಗೆ ಇನ್ನೊಂದು ವಾರ ಇದೆ ಅನ್ನುವಾಗ, ದೈಹಿಕ ಶಿಕ್ಷಣ ಶಿಕ್ಷಕರು ನಮ್ಮ ಕಠಿಣ ಅಭ್ಯಾಸವನ್ನು ನಿಲ್ಲಿಸುತ್ತಿದ್ದರು. ಆ ಒಂದು ವಾರ ಬರೀ ಲಘು ದೈಹಿಕ ಚಟುವಟಿಕೆಗಳು. ಒತ್ತಡ ನಿವಾರಿಸುವ ದಿಸೆಯಲ್ಲಿ ನಿರಾಳ ಮಾತುಕತೆ. ಆಟದ ಕುರಿತಾಗಿ ಸಕಾರಾತ್ಮಕ ವಿಚಾರಗಳನ್ನು ಚರ್ಚಿಸುತ್ತಿದ್ದರು.

ಕಠಿಣ ಅಭ್ಯಾಸ ಯಾಕೆ ಬೇಡ ಎಂದು ಕೇಳಿದರೆ 'ಆಟ ಆಡುತ್ತಾ ಏನಾದರೂ ಗಾಯಗಳಾದರೆ ಪಂದ್ಯಾವಳಿಗೆ ದೊಡ್ಡ ಹೊಡೆತ ಬೀಳುತ್ತದೆ. ವಿಶ್ರಾಂತಿ ಇಲ್ಲದ ಅಭ್ಯಾಸ ಸುಸ್ತು ಮಾಡುತ್ತದೆ. ಅಲ್ಲದೆ ಒತ್ತಡವನ್ನೂ ತರುತ್ತದೆ' ಎನ್ನುತ್ತಿದ್ದರು. ಅವರ ಈ ಯೋಜನೆ ಕೆಲಸ ಮಾಡುತ್ತಿತ್ತು. ನಾವು ಬಹಳ ಆತ್ಮವಿಶ್ವಾಸದಲ್ಲೇ ಆಡಿ ಗೆಲ್ಲುತ್ತಿದ್ದೆವು.

ನಮ್ಮ ಪಕ್ಕದ ಮನೆಯಲ್ಲಿ ಹತ್ತನೇ ತರಗತಿ ಓದುತ್ತಿರುವ ಮಗುವಿನ ಪೋಷಕರು ಮಗನ ಸರಣಿ ಪೂರ್ವಸಿದ್ಧತಾ ಪರೀಕ್ಷೆಗಳ ಬಗ್ಗೆ ಅಲವತ್ತುಕೊಂಡರು. ಮಗುವನ್ನು ಮುಖ್ಯ ಪರೀಕ್ಷೆಗೆ ಸಜ್ಜಾಗಿಸಲು ಎಷ್ಟು ಪೂರ್ವಸಿದ್ಧತಾ ಪರೀಕ್ಷೆಗಳನ್ನು ಕೊಡಬಹುದು? ಒಂದು ಅಥವಾ ಎರಡು ಸಾಕಾಗುತ್ತದೆ. ಆದರೆ ಅವುಗಳ ಸಂಖ್ಯೆ ನಾಲ್ಕೋ ಐದೋ ಆದರೆ ಏನಾಗಬಹುದು?

'ಒಂದು ತಿಂಗಳಿನಿಂದ ದಿನಾಲೂ ಪರೀಕ್ಷೆ ಬರೆದೂ ಬರೆದೂ ಸಾಕಾಗಿದೆ. ಇವತ್ತು ರಾತ್ರಿ ಓದು, ನಾಳೆ ಹಗಲು ಬರೆ... ಎರಡು ಸಬ್ಜೆಕ್ಟ್‌ಗಳಲ್ಲಿ ನಾನು ಸ್ವಲ್ಪ ವೀಕು. ಅದರ ಕಡೆ ಹೆಚ್ಚು ಗಮನಹರಿಸುವುದಕ್ಕೇ ಆಗುತ್ತಿಲ್ಲ. ಪರೀಕ್ಷೆ ಎಂದರೆ ವಾಕರಿಕೆ ಬಂದಂತೆ ಆಗುತ್ತಿದೆ' ಅಂದನಂತೆ ಅವರ ಮಗ. ಹೆಚ್ಚು ಪೂರ್ವಸಿದ್ಧತಾ ಪರೀಕ್ಷೆಗಳು ಅಂದರೆ ಒಳ್ಳೆಯದು, ಪರಿಣಾಮಕಾರಿ ಅಂದುಕೊಂಡಿದ್ದ ಅವರ ಪೋಷಕರಿಗೆ ಗಾಬರಿಯಾಗಿದೆ.

ಮುಖ್ಯ ಪರೀಕ್ಷೆ ಬರೆಯುವ ಮುಂಚೆಯೇ ಆ ಹುಡುಗ ಅಂಕಣದಿಂದ ನಿರ್ಗಮಿಸಲು ಯೋಚಿಸಿದನೇ? ಪರೀಕ್ಷೆ ಬಗ್ಗೆ ಇರುವ ಕುತೂಹಲ, ಆಸಕ್ತಿ, ಸಣ್ಣ ಆರೋಗ್ಯಯುತ ಭಯ ಇಲ್ಲದೇಹೋದರೆ ಮುಖ್ಯ ಪರೀಕ್ಷೆ ಬೇರೆಯದೇ ಬಗೆಯ ಫಲಿತಾಂಶ ಕೊಡಬಹುದು. ನಷ್ಟ ಮಾತ್ರ ಮಗುವಿಗೆ.

ಪೂರ್ವಸಿದ್ಧತಾ ಪರೀಕ್ಷೆಗಳಿಂದ ಮಗುವಿನ ಮುಖ್ಯ ಪರೀಕ್ಷೆಗೆ ಮಾತ್ರ ಅನುಕೂಲವಾದರೆ ಸಾಕು. ಅದು ಅವರನ್ನು ಕಾಡಿಸುವಂತೆ ಇರಬಾರದು. ಮಕ್ಕಳು ಸುಸ್ತಾಗುವಂತೆ ಮಾಡಬಾರದು. ಸರಣಿ ಪರೀಕ್ಷೆಗಳನ್ನು ನಡೆಸುವುದು ಒಂದು ಶಾಲೆಯ ಹೆಗ್ಗಳಿಕೆಯಲ್ಲ.

ಪರೀಕ್ಷಾ ದಿನದ ಸಿದ್ಧತೆಗಳೇನು, ಮೂರು ಗಂಟೆಯ ಆ ಸಮಯವನ್ನು ಹೇಗೆ ಹೊಂದಿಸಿಕೊಳ್ಳಬೇಕು, ಯಾವ ಪ್ರಶ್ನೆಗೆ ಎಷ್ಟು ಸಮಯ ಬಳಸಿಕೊಳ್ಳಬೇಕು, ಉತ್ತರ ಬರೆಯುವ ಪರಿ ಹೇಗೆ, ಅಂಕಗಳನ್ನು ಪಡೆಯುವ ತಂತ್ರ ಯಾವುದು, ಪರೀಕ್ಷಾ ಕೊಠಡಿಯಲ್ಲಿ ಶಿಸ್ತು ಹಾಗೂ ಗಾಂಭೀರ್ಯವನ್ನು ಹೇಗೆ ಕಂಡುಕೊಳ್ಳಬೇಕು ಎಂಬಂತಹ ಸಂಗತಿಗಳ ಬಗ್ಗೆ ಮಕ್ಕಳಿಗೆ ಅಭ್ಯಾಸ ಮಾಡಿಸಲು ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಡೆಸಲಾಗುತ್ತದೆ.

ಈ ಕ್ರಮ ತಿಳಿಸಲು ಒಂದು ಅಥವಾ ಎರಡು ಸರಣಿ ಪರೀಕ್ಷೆಗಳು ಸಾಕು. ನಾಲ್ಕಾರು ಪರೀಕ್ಷೆಗಳನ್ನು ನಡೆಸಿ ಒಂದು ತಿಂಗಳು ಮಗುವಿನ ಸಮಯವನ್ನೂ ಶ್ರಮವನ್ನೂ ತಿಂದುಹಾಕಬಾರದು. ಅದರಿಂದ ದೇಹ ಮತ್ತು ಮನಸ್ಸು ಎರಡೂ ದಣಿದು ಹೋಗುತ್ತವೆ.

ಮಗು ಒಂದೆರಡು ಪೂರ್ವಸಿದ್ಧತಾ ಪರೀಕ್ಷೆಗಳನ್ನು ತೀರಾ ಗಂಭೀರವಾಗಿ ತೆಗೆದುಕೊಳ್ಳಬಹುದು. ಅಭ್ಯಾಸ ಮಾಡಬಹುದು. ನಂತರವೂ ಮತ್ತೊಂದು, ಇನ್ನೊಂದು ಅಂದರೆ ಮಗುವಿನ ಮನಸ್ಸು ಒದ್ದಾಡುತ್ತದೆ. ಅಭ್ಯಾಸ ಕೈ ಬಿಡುತ್ತದೆ. ಏನೋ ಒಂದು ಎಂದು ಬರೆದು ಬರುತ್ತದೆ. ಯಾವುದು ಕೂಡ ಅತಿ ಆಗಬಾರದು!

ನಾಲ್ಕು ಪರೀಕ್ಷೆಗಳನ್ನು ಬರೆಯುವುದರಿಂದ ಕಲಿತದ್ದು ಹೆಚ್ಚು ಮನನ ಆಗಬಹುದು. ಹೀಗಾಗಿ, ಅದಾಗಲೇ ಎಲ್ಲವನ್ನೂ ಕಲಿತ ಮಕ್ಕಳಿಗೆ ಅದು ಪುನರಾವರ್ತನೆಯಂತೆ ಭಾಸವಾಗಬಹುದು.

ಇನ್ನೂ ಕಲಿಯುತ್ತಿರುವ ನಿಧಾನಗತಿಯ ಮಕ್ಕಳಿಗೆ ಅಷ್ಟೊಂದು ಅನುಕೂಲವಾಗದು. ಅವರಿಗೆ ಕಲಿಯಲು ಬಹಳಷ್ಟು ಸಮಯ ಬೇಕು. ಪರೀಕ್ಷೆಗಳ ಸಂಖ್ಯೆ ಹೆಚ್ಚಾದರೆ ಆ ಸಮಯದಲ್ಲಿ ಮಗು ನಿರಂತರವಾಗಿ ಪರೀಕ್ಷೆ ಬರೆಯುತ್ತಾ ಕೂರಬೇಕಾಗುತ್ತದೆ.

ತಾನು ಏನು ಕಲಿಯಬೇಕು, ತುಂಬಾ ಹಿಂದಿರುವ ವಿಷಯದಲ್ಲಿ ಹೇಗೆ ಸುಧಾರಿಸಿಕೊಳ್ಳಬೇಕು ಎಂದು ಯೋಜಿಸುವುದಕ್ಕೆ ಸಮಯ ಮತ್ತು ಸಂಬಂಧಿಸಿದ ಶಿಕ್ಷಕರು ಇಬ್ಬರೂ ಪೂರ್ಣವಾಗಿ ಲಭ್ಯವಾಗುವುದಿಲ್ಲ. ಅಲ್ಲದೆ ನಾಲ್ಕು ಪೂರ್ವಸಿದ್ಧತಾ ಪರೀಕ್ಷೆಗಳನ್ನು ಬರೆದ ಮಾತ್ರಕ್ಕೆ ಮಗು ಸಂಪೂರ್ಣವಾಗಿ ಶಕ್ತವಾಗುವುದಿಲ್ಲ. ಸತತ ಅಭ್ಯಾಸ ಮತ್ತು ಪುನರಾವರ್ತಿತ ಕಲಿಕೆಗೆ ಅವಕಾಶ ಇರಬೇಕು.

ಹತ್ತನೇ ತರಗತಿಯ ಮಕ್ಕಳು ಎದುರಿಸುವ ಇನ್ನೊಂದು ಸಮಸ್ಯೆ ಎಂದರೆ, ಮೂರು ತಿಂಗಳ ಮುಂಚೆಯೇ ಅವರ ಸಿಲೆಬಸ್ ಬೋಧನೆ ಮುಗಿದು ಹೋಗಿರುತ್ತದೆ. ಬೋಧನೆಯನ್ನು ಬಹಳಷ್ಟು ವೇಗವಾಗಿ ಮಾಡಲಾಗುತ್ತದೆ. ಶಿಕ್ಷಕರಿಗೆ ಇದು ಅನಿವಾರ್ಯ. ಏಕೆಂದರೆ ಸರಣಿ ಪರೀಕ್ಷೆಗೆ ಸಮಯ ಕೊಡಬೇಕು ಮತ್ತು ಅದಕ್ಕೆ ತಯಾರಿ ಮಾಡಿಕೊಳ್ಳಬೇಕು.



ಬೋಧನೆಯ ಗತಿ ವೇಗವಾಗುವುದರಿಂದ ಮಗು ಪಠ್ಯವನ್ನು ಆಳವಾಗಿ ಮತ್ತು ಪರಿಣಾಮಕಾರಿಯಾಗಿ ಕಲಿಯಲು ಸಾಧ್ಯವಾಗುವುದಿಲ್ಲ. ಬರೀ ಪರೀಕ್ಷಾ ಉದ್ದೇಶಕ್ಕಾಗಿ ವೇಗದಿಂದ ಕಲಿತು ಪರೀಕ್ಷೆ ಬರೆದು ಮರೆತುಬಿಡುವಂತಹ ಕಲಿಕೆಯಾಗಿರುತ್ತದೆ ಅದು. ಶಿಕ್ಷಣ ಅಂದರೆ ಬರೀ ಪರೀಕ್ಷೆಯಲ್ಲ, ಅದು ಬದುಕು ಎಂದು ಸದಾ ತುತ್ತೂರಿ ಊದುವ ನಾವು ಈ ಕ್ರಮವನ್ನು ಬಿಡಬೇಕು.

ಓದು-ಬರಹ-ಪರೀಕ್ಷೆಗಳು ಈ ಹೊತ್ತಿನಲ್ಲಿ ಮಗುವನ್ನು ಬಹಳಷ್ಟು ಹೈರಾಣಾಗಿಸುತ್ತಿವೆ. ಅವರ ಬಾಲ್ಯ, ಮುಗ್ಧತೆ, ಕುತೂಹಲ, ಕನಸು ಎಲ್ಲವೂ ನಮ್ಮ ಅತೀವ ಹೇರಿಕೆಯಿಂದ ಕಮರಿ ಹೋಗುತ್ತಿವೆ. ಮಕ್ಕಳಸ್ನೇಹಿ ಶಿಕ್ಷಣ ವ್ಯವಸ್ಥೆ, ಪರೀಕ್ಷಾ ವ್ಯವಸ್ಥೆ ಎಂದು ಬರುವುದೋ?!

## ದಾಸವಾಳ ಹೂವಿನಲ್ಲಿದೆ ಆರೋಗ್ಯದ ಗುಟ್ಟು..!

ದಾಸವಾಳದ ಹೂವು ಪೂಜೆಗೆ ಮಾತ್ರವಲ್ಲ ಸೌಂದರ್ಯ ಹಾಗೂ ಆರೋಗ್ಯದ ದೃಷ್ಟಿಯಿಂದಲೂ ಹೆಚ್ಚು ಪ್ರಯೋಜನಕಾರಿಯಾಗಿದೆ. ಚರ್ಮ ಮತ್ತು ಕೂದಲು ಸೇರಿದಂತೆ ಹಲವು ಆರೋಗ್ಯ ಸಂಬಂಧಿತ ಸಮಸ್ಯೆಗಳಿಗೆ ದಾಸವಾಳದ ಹೂವು ಎಲ್ಲಾ ರೀತಿಯಿಂದಲೂ ಸಹಕಾರಿ ಇದರಲ್ಲಿರುವ ಔಷಧೀಯ ಗುಣಗಳು ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಸಮಸ್ಯೆಯಲ್ಲೂ ಪ್ರಯೋಜನಕಾರಿ.

ದಾಸವಾಳವು ಕಾರ್ಬೋಹೈಡ್ರೇಟ್, ಕೊಬ್ಬು, ಪ್ರೋಟೀನ್, ವಿಟಮಿನ್ ಸಿ, ಕ್ಯಾಲ್ಸಿಯಂ, ಕಬ್ಬಿಣ ಹೀಗೆ ಹಲವು ಪೋಷಾಕಾಂಶಗಳನ್ನು ಹೊಂದಿದೆ.

ಆರೋಗ್ಯಕ್ಕೆ ದಾಸವಾಳ ಮಧುಮೇಹ ನಿಯಂತ್ರಣ ದಾಸವಾಳದ ಸಾರವು ಆಂಟಿ-ಇನ್ಸುಲಿನ್ ಪ್ರತಿರೋಧ ಗುಣಲಕ್ಷಣಗಳನ್ನು ಹೊಂದಿದೆ ಎಂದು ಅಧ್ಯಯನ ತಿಳಿಸಲಾಗಿದೆ ಅಧಿಕ ರಕ್ತದ ಸಕ್ಕರೆ ಮತ್ತು ಇನ್ಸುಲಿನ್ ಮಟ್ಟವನ್ನು ಕಡಿಮೆ ಮಾಡುತ್ತದೆ ಕೇಶರಾಶಿಗೆ ಸಹಕಾರಿ ದಾಸವಾಳದ ಎಲೆಗಳು ಮತ್ತು ಹೂವುಗಳು ಕೂದಲಿನ ಆರೋಗ್ಯಕ್ಕೆ ಪ್ರಯೋಜನಕಾರಿ ಗುಣಗಳನ್ನು ಹೊಂದಿದೆ.

ದಾಸವಾಳದ ಎಲೆಗಳು ಮತ್ತು ಹೂವುಗಳು ನೈಸರ್ಗಿಕ ವರ್ಣದ್ರವ್ಯವಾಗಿದೆ. ಆಕ್ಸಿಡೀಕರಣ ನಿರೋಧಕಗಳು ಮತ್ತು ವಿಟಮಿನ್‌ಗಳನ್ನು ಒಳಗೊಂಡಿರುತ್ತವೆ. ವಾರದಲ್ಲಿ



ಎರಡುಬಾರಿ ದಾಸವಾಳ ಎಲೆ ಅಥವಾ ಹೂಗಳನ್ನು ಕೂದಲಿಗೆ ಹಚ್ಚುವುದರಿಂದ ನೇರವಾಗಿ ಪರಿಣಾಮ ಬೀರಿಉತ್ತಮ ಕೇಶರಾಶಿ ಹೊಂದಲು ಸಹಕರಿಸುತ್ತದೆ.

ಉತ್ತಮ ತ್ವಚೆಗಾಗಿ ದಾಸವಾಳ ಹೈಬಿಸ್ಕಸ್ ಸಸ್ಯಗಳು ಲೋಳೆಗಳ ಅಂಶಗಳನ್ನು ಹೆಚ್ಚು ಹೊಂದಿರುವುದರಿಂದ ಅವುಗಳು ಪಾಲಿಸ್ಯಾಕರೈಡ್ಗಳ ಗುಂಪಿಗೆ ಸೇರುತ್ತವೆ. ಇದರ ಎಲೆಗಳನ್ನು ಚರ್ಮದ ಕಾಯಿಲೆಗಳನ್ನು ಬಳಸಲಾಗುತ್ತದೆ.

ಹೈಬಿಸ್ಕಸ್ ಲೋಳೆಯ ಸಾರವು ಗ್ಲಿಸರಿನ್ ಅನ್ನು ಹೊಂದಿರುತ್ತದೆ, ಇದು ಚರ್ಮವನ್ನು ವೃಧುವಾಗಿಸುದಲ್ಲದೇ ಕಾಂತಿಯುತವಾಗಿಸುತ್ತದೆ.

## ಕ್ಯಾಲ್ಸಿಯಂ ಕೊರತೆಯಾದ್ರೆ ಎದುರಿಸಬೇಕಾಗುತ್ತೆ ಅನೇಕ ಸಮಸ್ಯೆ

ನಮ್ಮ ದೇಹಕ್ಕೆ ಅಗತ್ಯವಿರುವ ಪೌಷ್ಠಿಕಾಂಶಗಳಲ್ಲಿ ಕ್ಯಾಲ್ಸಿಯಂ ಕೂಡ ಒಂದು. ಕ್ಯಾಲ್ಸಿಯಂ ನಮ್ಮ ಆರೋಗ್ಯ ಹಾಗೂ ಬೆಳವಣಿಗೆಯಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತದೆ. ಕ್ಯಾಲ್ಸಿಯಂ ಕಡಿಮೆಯಾದ್ರೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನಮ್ಮ ದೇಹದಲ್ಲಿ ಕ್ಯಾಲ್ಸಿಯಂ ಕಡಿಮೆಯಾಗಿದೆಯಾ ಎಂಬುದನ್ನು ಸುಲಭವಾಗಿ ತಿಳಿಯಬಹುದು.

**ಅದ್ರ ಲಕ್ಷಣಗಳು ಇಂತಿವೆ:** ನಿಮ್ಮ ಮೂಳೆಗಳು ದುರ್ಬಲವಾಗಿವೆ ಅಂದ್ರೆ ನಿಮ್ಮ ದೇಹದಲ್ಲಿ ಕ್ಯಾಲ್ಸಿಯಂ ಕೊರತೆಯಾಗಿದೆ ಎಂಬುದು ಸ್ಪಷ್ಟ. ಕ್ಯಾಲ್ಸಿಯಂ ಕೊರತೆಯಿಂದ ಮೂಳೆಗಳು ದುರ್ಬಲವಾಗುತ್ತವೆ. ಮಕ್ಕಳಲ್ಲಿ ಬಹುಬೇಗ ಮೂಳೆ ಮುರಿತ ಕಂಡು ಬರುತ್ತದೆ. ಸ್ನಾಯುಗಳು ಬಿಗಿಯುವುದು, ನೋವು ಕಾಣಿಸಿಕೊಳ್ಳುತ್ತದೆ.

ಕ್ಯಾಲ್ಸಿಯಂ ಕೊರತೆಯ ಇನ್ನೊಂದು ಲಕ್ಷಣ ಹಲ್ಲು ದುರ್ಬಲವಾಗುವುದು. ದಂತಕ್ಷಯ ಕ್ಯಾಲ್ಸಿಯಂ ಕೊರತೆಯ ಮೊದಲ ಲಕ್ಷಣ. ಮಕ್ಕಳಲ್ಲಿ ಕ್ಯಾಲ್ಸಿಯಂ ಕೊರತೆಯಾದ್ರೆ ತಡವಾಗಿ ಹಲ್ಲುಗಳು ಬರುತ್ತವೆ.

ಉಗುರುಗಳು ದುರ್ಬಲವಾಗುವುದು ಇನ್ನೊಂದು ಲಕ್ಷಣ. ಆರೋಗ್ಯಕರ ಉಗುರಿಗೆ ಕ್ಯಾಲ್ಸಿಯಂ ಬಹಳ ಮುಖ್ಯ. ಕ್ಯಾಲ್ಸಿಯಂ ಕಡಿಮೆಯಾದ್ರೆ ಉಗುರುಗಳು




ಬಹಳ ಬೇಗ ಮುರಿದು ಬೀಳುತ್ತವೆ.

ಹುಡುಗಿಯರಲ್ಲಿ ತಡವಾಗಿ ಮುಟ್ಟು ಶುರುವಾದ್ರೆ ಅವರಲ್ಲಿ ಕ್ಯಾಲ್ಸಿಯಂ ಕೊರತೆಯಿದೆ ಎಂದೇ ಅರ್ಥ. ಕೂದಲು ಉದುರುತ್ತಿದ್ದರೆ, ಕೂದಲಿನ ಬೆಳವಣಿಗೆ ಕುಂಟಿತಗೊಂಡಿದ್ದರೆ ಕ್ಯಾಲ್ಸಿಯಂ ಕೊರತೆಯಾಗಿದೆ ಎಂಬುದು ಸ್ಪಷ್ಟ. ಸದಾ ದಣಿವು ಎನ್ನುತ್ತಿರುವ ವ್ಯಕ್ತಿಯಲ್ಲೂ ಕ್ಯಾಲ್ಸಿಯಂ ಕೊರತೆ ಎದ್ದು ಕಾಣುತ್ತದೆ.

ಕ್ಯಾಲ್ಸಿಯಂ ಕೊರತೆಯಿಂದ ಮೂಳೆ, ಸ್ನಾಯುಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ. ಹಾಗೆ ನಿದ್ದೆ ಬರುವುದಿಲ್ಲ. ಇದು ಮಾನಸಿಕ ಒತ್ತಡ, ಭಯಕ್ಕೂ ಕಾರಣವಾಗುತ್ತದೆ. ಜೊತೆಗೆ ದಣಿವಾಗುತ್ತದೆ.

## ಮಕ್ಕಳ ಮೂಳೆ ಆರೋಗ್ಯದ ಬಗ್ಗೆ ಪೋಷಕರು ಗಮನ ಹರಿಸಲೇಬೇಕು!

ಪಾಲಕರು ತಮ್ಮ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಜೊತೆಗೆ ತಮ್ಮ ಮಕ್ಕಳ ಮೂಳೆಗಳ ಆರೋಗ್ಯದ ಬಗ್ಗೆಯೂ ಗಮನ ಹರಿಸಬೇಕು. ಬಾಲ್ಯದಲ್ಲಿ ದೃಢವಾದ ಮೂಳೆಗಳು ಜೀವಿತಾವಧಿಯ ಆರೋಗ್ಯಕ್ಕೆ ಉತ್ತಮ ಅಡಿಪಾಯವನ್ನು ಹಾಕುತ್ತವೆ.

ಗಟ್ಟಿಮುಟ್ಟಾದ ಮೂಳೆಗಳಿಗೆ ಬೇಕಾಗುವ ಪೋಷಕಾಂಶಗಳು ಮಕ್ಕಳಿಗೆ ಸಿಗುವಂತೆ ಮಾಡಬೇಕು. ಅವುಗಳೆಂದರೆ ಕ್ಯಾಲ್ಸಿಯಂ, ವಿಟಮಿನ್ ಡಿ ಮತ್ತು ದೈಹಿಕ ವ್ಯಾಯಾಮಗಳು.

ಹೃದಯದ ಆರೋಗ್ಯ, ಸ್ನಾಯುಗಳ ಬಲ ಮತ್ತು ಮೂಳೆಗಳ ಬೆಳವಣಿಗೆಗೆ ಕ್ಯಾಲ್ಸಿಯಂ ಅಗತ್ಯವಿದೆ. ಹಾಲು, ಚೀಸ್ ಮತ್ತು ಮೊಸರು ಸೇರಿದಂತೆ ಡೈರಿ ಉತ್ಪನ್ನಗಳ ಮೂಲಕ ಕ್ಯಾಲ್ಸಿಯಂ ಅನ್ನು ಪಡೆಯಲಾಗುತ್ತದೆ. ಮಕ್ಕಳ ಮೂಳೆಗಳ ಬೆಳವಣಿಗೆಯನ್ನು ಬೆಂಬಲಿಸಲು, ಪೋಷಕರು ತಮ್ಮ ಮಕ್ಕಳಿಗೆ ದಿನಕ್ಕೆ ಕನಿಷ್ಠ 2 ಲೋಟ ಹಾಲು ಕುಡಿಸಬೇಕು. ಅದರೊಂದಿಗೆ ಪಾಲಕ್, ಎಲೆಕೋಸು ಮತ್ತು ಬೆಂಡೆಕಾಯಿಯಂತಹ ಹಸಿರು ತರಕಾರಿಗಳನ್ನು ಮಗುವಿನ ಆಹಾರದಲ್ಲಿ ಸೇರಿಸಬೇಕು.

ಮೀನು ಮತ್ತು ಸೋಯಾಬೀನ್ ಉತ್ಪನ್ನಗಳನ್ನು ಸೋಯಾ ಹಾಲು ಮತ್ತು ಸೋಯಾ ಮೊಸರು ನೀಡುವುದು ಒಳ್ಳೆಯದು. ಮಕ್ಕಳ ಆಹಾರದಲ್ಲಿ ಸಾಕಷ್ಟು ವಿಟಮಿನ್ ಡಿ ಇರಬೇಕು. ಮೂಳೆ ರಚನೆಗೆ ವಿಟಮಿನ್ ಡಿ ಬಹಳ ಮುಖ್ಯ. ನವಜಾತ ಶಿಶುಗಳಿಗೆ ವಿಟಮಿನ್ ಡಿ ಪೂರಕಗಳ ಅಗತ್ಯವಿರುತ್ತದೆ.



ತಂಪಾದ ಪಾನೀಯಗಳನ್ನು ತಪ್ಪಿಸಿ ಏಕೆಂದರೆ ಅವುಗಳು ಸಾಮಾನ್ಯವಾಗಿ ಕೆಲವು ಫಾಸ್ಪರಿಕ್ ಆಮ್ಲವನ್ನು ಹೊಂದಿರುತ್ತವೆ. ಇದು ಕ್ಯಾಲ್ಸಿಯಂ ಹೀರಿಕೊಳ್ಳುವಿಕೆಯನ್ನು ತಡೆಯುವುದರಿಂದ, ಈ ಆಮ್ಲಗಳು ಮೂಳೆಗಳಿಗೆ ಹಾನಿಕಾರಕವಾಗಿದೆ. ಕಿತ್ತಳೆ ರಸದಂತಹ ಆರೋಗ್ಯಕರ ಪಾನೀಯಗಳನ್ನು ಮಕ್ಕಳಿಗೆ ನೀಡಬೇಕು.

ಮೂಳೆ ಬೆಳವಣಿಗೆಗೆ ಬಾಲ್ಯದಲ್ಲಿ ಸರಿಯಾದ ಪೋಷಣೆ ಅದನ್ನು ದೇಹಕ್ಕೆ ನೀಡುವುದರಿಂದ ಮಾತ್ರ ಸಾಧ್ಯ. ಬಾಲ್ಯದಲ್ಲಿ ಮೂಳೆಗಳ ಆರೋಗ್ಯದ ಬಗ್ಗೆ ಗಮನ ಹರಿಸಿದರೆ ವೃದ್ಧಾಪ್ಯದಲ್ಲಿ ಮೂಳೆಗಳು ದುರ್ಬಲವಾಗುವುದಿಲ್ಲ. ಯಾವುದೇ ವಯಸ್ಸಿನಲ್ಲಿ ಸರಿಯಾದ ಪೋಷಣೆ ಇಲ್ಲದೆ, ಮೂಳೆ ಸಂಬಂಧಿತ ಸಮಸ್ಯೆಗಳು ಅನಿವಾರ್ಯ. ಹೆಚ್ಚಿದ ಚಟುವಟಿಕೆಯು ಮೂಳೆಗಳನ್ನು ಬಲಪಡಿಸುತ್ತದೆ, ಆದ್ದರಿಂದ ನಿಯಮಿತವಾಗಿ ವ್ಯಾಯಾಮ ಮಾಡಿಸಿ.

## ರುಚಿಯಾದ ಹಾಲು ಪಾಯಸ ಮಾಡುವ ವಿಧಾನ

ಹಬ್ಬಕ್ಕೆ ಅಥವಾ ಏನಾದರೂ ವಿಶೇಷ ಸಂದರ್ಭದಲ್ಲಿ ಸಿಹಿ ಮಾಡಬೇಕು ಅನಿಸಿದಾಗ ಒಮ್ಮೆ ಈ ರುಚಿಕರವಾದ ಹಾಲು ಪಾಯಸ ಮಾಡಿ ಸವಿಯಿರಿ. ಇದು ತುಂಬಾ ರುಚಿಕರವಾಗಿರುತ್ತದೆ.

ಬೇಕಾಗುವ ಸಾಮಗ್ರಿಗಳು: ಹಾಲು-4 ಕಪ್, ಅಕ್ಕಿ-2 ಟೇಬಲ್ ಸ್ಪೂನ್, ತುಪ್ಪ-1 ಟೀ ಸ್ಪೂನ್, ಸಕ್ಕರೆ-1/4 ಕಪ್, ಕೇಸರಿದಳ-5 ಎಸಳು, ಏಲಕ್ಕಿ ಪುಡಿ-ಚಿಟಿಕೆ.

ಮಾಡುವ ವಿಧಾನ: ಮೊದಲಿಗೆ ಗ್ಯಾಸ್ ಮೇಲೆ ಒಂದು ಪ್ಯಾನ್ ಇಟ್ಟು ಅದಕ್ಕೆ ತುಪ್ಪ ಹಾಕಿ ಅದು ಬಿಸಿಯಾಗುತ್ತಲೇ ಬಾಸುಮತಿ ಅಕ್ಕಿ ಸೇರಿಸಿ ಅದು ಕೆಂಪಗಾಗುವವರೆಗೆ ಹುರಿದುಕೊಂಡು ಒಂದು ಮಿಕ್ಸಿ ಜಾರಿನಲ್ಲಿ ತರಿ ತರಿಯಾಗಿ ರುಬ್ಬಿಕೊಳ್ಳಿ. ನೀರು ಸೇರಿಸುವುದು ಬೇಡ.

ನಂತರ ಒಂದು ಕುಕ್ಕರ್ ತೆಗೆದುಕೊಂಡು ಅದಕ್ಕೆ ೪ ಟೀ ಸ್ಪೂನ್ ತುಪ್ಪ ಹಾಕಿ ಕುಕ್ಕರ್ ನ ಒಳಭಾಗಕ್ಕೆ ಈ ತುಪ್ಪ ಸವರಿ. ನಂತರ ಇದಕ್ಕೆ ಹಾಲು ಹಾಕಿ ಕುದಿಸಿ. ಇದಕ್ಕೆ ತರಿ ತರಿಯಾಗಿ ರುಬ್ಬಿದ ಅಕ್ಕಿ ಸೇರಿಸಿ



ಸಣ್ಣ ಉರಿಯಲ್ಲಿ ಕುದಿಸಿ.

ಇದು ಕುದಿಯಲು ಶುರು ಮಾಡಿದಾಗ ಕುಕ್ಕರ್ ಮುಚ್ಚಳ ಮುಚ್ಚಿ. ವಿಷಲ್ ಬರುತ್ತದೆ ಎನ್ನುವಾಗ ಗ್ಯಾಸ್ ಆಫ್ ಮಾಡಿ. ನಂತರ ಮುಚ್ಚಳ ತೆಗೆದು ಹಾಲು ದಪ್ಪಗಾಗುವವರೆಗೆ ಕುದಿಸಿಕೊಳ್ಳಿ. ನಂತರ ಸಕ್ಕರೆ ಸೇರಿಸಿ ಸಕ್ಕರೆ ಕರಗುವವರೆಗೆ ಬೇಯಿಸಿಕೊಳ್ಳಿ. ನಂತರ ಕೇಸರಿ ದಳ, ಏಲ್ಕಕಿ ಪುಡಿ ಸೇರಿಸಿ ಗ್ಯಾಸ್ ಆಫ್ ಮಾಡಿ. ಬಿಸಿ ಇರುವಾಗಲೇ ಸರ್ವ್ ಮಾಡಿ.

## ತೂಕ ಇಳಿಕೆಯ ಜೊತೆಗೆ ಹಲವು ಆರೋಗ್ಯ ಸಮಸ್ಯೆಗಳಲ್ಲಿ ಪರಿಣಾಮಕಾರಿ ಈ ಚಹಾ ಸೇವನೆ!

ಚಳಿಗಾಲದಲ್ಲಿ ಸಾಮಾನ್ಯ ಚಹಾವನ್ನು ಕುಡಿಯುವುದು ಸಾಕಷ್ಟು ಪ್ರಯೋಜನಗಳನ್ನು ನೀಡುತ್ತದೆ, ಶುಂಠಿ ಮತ್ತು ಮಸಾಲೆಗಳನ್ನು ಬೆರೆಸಿ ಚಹಾವನ್ನು ಕುಡಿಯುವುದರ ಹಲವು ಪ್ರಯೋಜನಗಳನ್ನು ನೀವು ತಿಳಿದಿರಬಹುದು. ಆದರೆ ಇಂದು ನಾವು ನಿಮಗೆ ತೆಂಗಿನಕಾಯಿ ಚಹಾದ ಪ್ರಯೋಜನಗಳ ಕುರಿತು ಮಾಹಿತಿಯನ್ನು ನೀಡುತ್ತಿದ್ದೇವೆ.

ಹೌದು, ಈ ಚಹಾ ನಿಮ್ಮ ದೇಹಕ್ಕೆ ತುಂಬಾ ಪ್ರಯೋಜನಕಾರಿಯಾಗಿದೆ. ತೆಂಗಿನಕಾಯಿ ಚಹಾದ ರುಚಿ ಕೂಡ ತುಂಬಾ ಅದ್ಭುತವಾಗಿರುತ್ತದೆ. ತೆಂಗಿನ ನೀರಿನ ಪ್ರಯೋಜನಗಳನ್ನು ನೀವು ತಿಳಿದಿರಬೇಕು, ಆದರೆ ಚಳಿಗಾಲದಲ್ಲಿ ತೆಂಗಿನಕಾಯಿ ಚಹಾವು ನಿಮಗೆ ತುಂಬಾ ಪರಿಣಾಮಕಾರಿಯಾಗಿದೆ. ಇದರ ಪ್ರಯೋಜನಗಳನ್ನು ತಿಳಿಯೋಣ ಬನ್ನಿ.

ರೋಗನಿರೋಧಕ ಶಕ್ತಿ ಹೆಚ್ಚಿಸಲು ಮತ್ತು ಹೃದ್ರೋಗದಂತಹ ಸಮಸ್ಯೆಗಳಲ್ಲಿ ಪ್ರಯೋಜನಕಾರಿ ಚಳಿಗಾಲದಲ್ಲಿ ದೇಹದ ರೋಗನಿರೋಧಕ ಶಕ್ತಿ ದುರ್ಬಲಗೊಳ್ಳುತ್ತದೆ. ಇಂತಹ ಪರಿಸ್ಥಿತಿಯಲ್ಲಿ, ಸೋಂಕನ್ನು ತಪ್ಪಿಸಲು ನೀವು ತೆಂಗಿನ ಚಹಾವನ್ನು ಬಳಸಬಹುದು. ಪದೇ ಪದೇ ರೋಗಗಳಿಗೆ ಗುರಿಯಾಗುವ ಜನರು ಇದನ್ನು ಬಳಸಬಹುದು. ಈ ಟೀ ಕುಡಿಯುವುದರಿಂದ ರೋಗನಿರೋಧಕ ಶಕ್ತಿ ಬೇಗನೇ ಹೆಚ್ಚಾಗುತ್ತದೆ. ಈ ಚಹಾವು ವಿಟಮಿನ್ ಸಿ ಮತ್ತು ಉತ್ಕರ್ಷಣ ನಿರೋಧಕಗ ಗುಣಗಳನ್ನು ಹೊಂದಿದೆ.

ಇತ್ತೀಚಿನ ದಿನಗಳಲ್ಲಿ ಜನರ ಆಹಾರ ಪದ್ಧತಿ ತುಂಬಾ ಹಾಳಾಗಿದೆ. ಈ ಕಾರಣದಿಂದಾಗಿ ಹೃದ್ರೋಗದಂತಹ ಸಮಸ್ಯೆಗಳು ಬೇಗನೆ



ವಕ್ಕರಿಸುತ್ತಿವೆ. ತೆಂಗಿನಕಾಯಿ ಚಹಾವು ಎಚ್‌ಡಿಎಲ್ ಕೊಲೆಸ್ಟ್ರಾಲ್ ಅನ್ನು ಹೊರಹಾಕಲು ಸಹಾಯ ಮಾಡುತ್ತದೆ ಮತ್ತು ಅಧಿಕ ರಕ್ತದೊತ್ತಡ ನಿಯಂತ್ರಿಸಲು ಸಹಾಯ ಮಾಡುತ್ತದೆ.

ತೂಕ ಇಳಿಕೆ ಮತ್ತು ಚರ್ಮದ ಆರೋಗ್ಯಕ್ಕೆ ಸಹಕಾರಿ ತೆಂಗಿನಕಾಯಿ ಚಹಾದಲ್ಲಿ ಕ್ಯಾಲೊರಿಗಳ ಪ್ರಮಾಣವು ತುಂಬಾ ಕಡಿಮೆಯಾಗಿರುತ್ತದೆ ಮತ್ತು ಅದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರಿನಂಶ ಇರುತ್ತದೆ.

ಈ ಕಾರಣದಿಂದಾಗಿ, ತೆಂಗಿನಕಾಯಿ ಚಹಾವನ್ನು ಕುಡಿಯುವುದು ತೂಕವನ್ನು ಇಳಿಸಿಕೊಳ್ಳಲು ಸಹಾಯ ಮಾಡುತ್ತದೆ. ನೀವೂ ಕೂಡ ತೂಕವನ್ನು ನಿಯಂತ್ರಿಸಲು ಬಯಸುತ್ತಿದ್ದರೆ, ಪ್ರತಿದಿನ ಈ ಚಹಾವನ್ನು ಸೇವಿಸಿ. ಇದಲ್ಲದೆ, ಈ ಚಹಾವು ಚರ್ಮಕ್ಕೆ ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ ಏಕೆಂದರೆ ಇದು ಕೊಬ್ಬು ಮತ್ತು ಉತ್ಕರ್ಷಣ ನಿರೋಧಕ ಗುಣಗಳಿಂದ ಸಮೃದ್ಧವಾಗಿದೆ. ಇದರಿಂದ ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆಗಳು ನಿವಾರಣೆಯಾಗುತ್ತವೆ.

ತೆಂಗಿನಕಾಯಿ ಚಹಾವನ್ನು ಹೇಗೆ ತಯಾರಿಸಬೇಕು >> ತೆಂಗಿನಕಾಯಿ ಚಹಾ ಬೇಕಾಗುವ ಸಾಮಗ್ರಿಗಳು: 3 ಕಪ್ ನೀರು, 1 ಕಪ್ ತೆಂಗಿನ ಹಾಲು, 1/2 ಕಪ್ ಹೆವಿ ಕ್ರೀಮ್, 2 ಬ್ಯಾಗ್ ಗ್ರೀನ್ ಟೀ, 1 ಟೀ ಚಮಚ ಬ್ರೌನ್ ಶುಗರ್. ಈ ಚಹಾವನ್ನು ತಯಾರಿಸಲು, ಒಂದು ಪಾತ್ರೆಯಲ್ಲಿ ನೀರನ್ನು ಕುದಿಸಿ. ಅದರಲ್ಲಿ ಗ್ರೀನ್ ಟೀ ಬ್ಯಾಗ್ ಗಳನ್ನು ಹಾಕಿ. ಇದಕ್ಕೆ ತೆಂಗಿನ ಹಾಲು ಸೇರಿಸಿ ಮತ್ತು ಹೆವಿ ಕ್ರೀಮ್ ಮಿಶ್ರಣ ಮಾಡಿ.

ಈ ಎಲ್ಲಾ ವಸ್ತುಗಳನ್ನು ಚೆನ್ನಾಗಿ ಮಿಶ್ರಣ ಮಾಡಿ ಮತ್ತು ಟೀ ಬ್ಯಾಗ್‌ಗಳನ್ನು ಹೊರತೆಗೆಯಿರಿ. ಟೇಸ್ಟ್ ಹೆಚ್ಚಿಸಲು ಬ್ರೌನ್ ಶುಗರ್ ಬೆರೆಸಿ. (ಹಕ್ಕುತ್ಯಾಗ-ಈ ಲೇಖನದಲ್ಲಿ ನೀಡಲಾಗಿರುವ ಮಾಹಿತಿ ಸಾಮಾನ್ಯ ಜ್ಞಾನ ಹಾಗೂ ಮನೆಮದ್ದು ಮಾಹಿತಿಯನ್ನು ಆಧರಿಸಿದೆ. ಅನುಸರಿಸುವ ಮುನ್ನ ವೈದ್ಯರ ಸಲಹೆ ಪಡೆದುಕೊಳ್ಳಿ.

## ದೇಹದ ತೂಕ ಹೆಚ್ಚಳಕ್ಕೆ ಪ್ರತಿನಿತ್ಯ ಮೊಟ್ಟೆ ಬಳಸಿ!



ಬೇಯಿಸಿದ ಮೊಟ್ಟೆಗಳು, ಆಮ್ಲೆಟ್‌ಗಳು, ಡೆವಿಲ್ಡ್ ಮೊಟ್ಟೆಗಳು ಮೊಟ್ಟೆಯು ಪ್ರಮುಖವಾದ ಆಹಾರವಾಗಿದೆ. ಆಹಾರದಲ್ಲಿ ಮೊಟ್ಟೆಗಳನ್ನು ಸೇವಿಸುವುದರಿಂದ ಹಲವು ಪ್ರಯೋಜನಗಳಿವೆ. ವಿಟಮಿನ್ಸ್ ಎ, (B5, B12, ಆ, ಇ, ಏ, B6,) ಫೋಲೇಟ್, ರಂಜಕ, ಸೆಲೆನಿಯಮ್, ಕ್ಯಾಲ್ಸಿಯಂ ಹಲವು ಪೋಷಕಾಂಶಗಳನ್ನು ಹೊಂದಿದೆ.

6 ಗ್ರಾಂಗಳಷ್ಟು ಪ್ರೋಟೀನ್ ಅಂಶ ಹಾಗೂ ಅಮೈನೋ ಆಮ್ಲಗಳ ಅಂಶ ಕೂಡ ಸೇರಿದೆ. ತೂಕ ಹೆಚ್ಚಿಸಲು ಮೊಟ್ಟೆ ತುಂಬಾ ಸಣ್ಣ ಇರುವವರು ದಿನ ನಿತ್ಯ ಆಹಾರ ಕ್ರಮದಲ್ಲಿ ಮೊಟ್ಟೆ ಬಳಸುವುದರಿಂದ ತೂಕ ಹೆಚ್ಚಳಕ್ಕೆ ಸಹಕಾರಿಯಾಗಬಹುದು. "ಹೈಪರ್ ರೆಸ್ಪಾಂಡರ್ಸ್" ಮೊಟ್ಟೆಯಲ್ಲಿರುವ ಅಂಶವು ಕೊಲೆಸ್ಟ್ರಾಲ್ ಅನ್ನು ಹೆಚ್ಚಿಸಬಹುದು.

ಉತ್ತಮ ದೃಷ್ಠಿ ಕೋಳಿ ಮೊಟ್ಟೆಯಲ್ಲಿರುವ ಲ್ಯೂಟೀನ್ ಮತ್ತು ಜಿಯಾಗ್ಸಾಂಥಿನ್ ಎಂಬ ಎರಡು ಶಕ್ತಿಯುತವಾದ ಆಂಟಿ-ಆಕ್ಸಿಡೆಂಟ್ ಗಳು ಕಣ್ಣಿನ ರೆಟಿನಾದ ಮೇಲೆ ಕಾರ್ಯನಿರ್ವಹಿಸುವುದರಿಂದ ಉತ್ತಮ ದೃಷ್ಠಿಗೆ ಸಹಕಾರಿಯಾಗಿದೆ.

ಸ್ನಾಯು ಬಲ ಪ್ರತಿ ದಿನ ಪ್ರೋಟಿನ್ ಅಂಶಗಳನ್ನು ಆಹಾರ ಸೇವನೆಯಿಂದ ಮಾಂಸ ಖಂಡಗಳು, ಮೂಳೆ ಬೆಳವಣಿಗೆ, ಸ್ನಾಯುಗಳ ಬೆಳವಣಿಗೆ ವೇಗವಾಗಿ ಆಗುತ್ತದೆ. ಬೆಳಗಿನ ಉಪಹಾರದಲ್ಲಿ ಮೊಟ್ಟೆಯ ಸೇವನೆಯಿಂದ ದೀರ್ಘ ಕಾಲದವರೆಗೆ ಹೊಟ್ಟೆ ಹಸಿವು ಆಗದಂತೆ ನೋಡಿಕೊಳ್ಳುತ್ತದೆ.

## ಹೃದಯದ ಆರೋಗ್ಯಕ್ಕೆ ತಿನ್ನಿ ಸೂರ್ಯಕಾಂತಿ ಬೀಜ

ಸೂರ್ಯಕಾಂತಿ ಬೀಜದಲ್ಲಿ ಇರುವ ವಿಟಮಿನ್ ಸಿ, ಬಿ, ಮ್ಯಾಗ್ನೀಶಿಯಂ, ಐರನ್, ಪೊಟ್ಯಾಷಿಯಂ, ಜಿಂಕ್, ಫಾಸ್ಫರಸ್, ಪ್ರೊಟೀನ್, ಆರೋಗ್ಯಕರ ಫ್ಯಾಟ್ ಆಗಿರುವ ಮೊನೊ ಅನ್ ಸ್ಯಾಚುರೇಟೆಡ್ ಅಂಶವನ್ನು ಹೊಂದಿದೆ. ಸೂರ್ಯಕಾಂತಿ ಬೀಜದಲ್ಲಿ ಇರುವ ವಿಟಮಿನ್ ಇ ಆಂಟಿ ಆಕ್ಸಿಡೆಂಟ್ ರೀತಿ ಕೆಲಸ ಮಾಡುತ್ತದೆ. ದೇಹದಲ್ಲಿ ಇರುವ ಫ್ರೀ ರಾಡಿಕಲ್ಸ್ ವಿರುದ್ಧ ಹೋರಾಡುತ್ತದೆ.



ಮೊಡವೆ ಸಮಸ್ಯೆಯಿಂದ ಬಳಲುತ್ತಿರುವವರು ಈ ಸೂರ್ಯಕಾಂತಿ ಬೀಜವನ್ನು ತಿಂಡಿ ಜೊತೆಗೆ ಸೇವಿಸುವುದರಿಂದ ಮೊಡವೆ ಸಮಸ್ಯೆ ಉಂಟಾಗದಂತೆ ತಡೆಯುತ್ತದೆ. ಸೂರ್ಯಕಾಂತಿ ಬೀಜವನ್ನು ಬ್ರೈನ್ ಫುಡ್ ಎಂದು ಕರೆಯುತ್ತಾರೆ. ಈ ಬೀಜ ಖಿನ್ನತೆ ಸಮಸ್ಯೆಯನ್ನು ದೂರ ಮಾಡುತ್ತದೆ. ಉತ್ತಮವಾದ ನಿದ್ರೆಗೆ ಸಹಾಯ ಮಾಡುತ್ತವೆ. ದೇಹದಲ್ಲಿ ಕ್ಯಾನ್ಸರ್ ಜೀವಕೋಶಗಳನ್ನು ಬೆಳೆಯದಂತೆ ಈ ಬೀಜ ನೋಡಿಕೊಳ್ಳುತ್ತದೆ. ಇದರಲ್ಲಿ ಇರುವ ಮ್ಯಾಗ್ನೀಷಿಯಮ್ ಅಂಶವು ರಕ್ತದೊತ್ತಡ ಸಮಸ್ಯೆಯನ್ನು ನಿವಾರಿಸುತ್ತದೆ.

ಸೂರ್ಯಕಾಂತಿ ಬೀಜದಲ್ಲಿ ಇರುವ ಕಾಫರ್ ಮತ್ತು ಜಿಂಕ್ ಅಂಶಗಳು ಆರೋಗ್ಯಕರ ಕೂದಲಿನ ಬೆಳವಣಿಗೆಗೆ ನೆರವಾಗುತ್ತದೆ.

## ಗೋಡಂಬಿಯಲ್ಲಿ ಅಡಗಿದೆ ಆರೋಗ್ಯದ ಗುಟ್ಟು

ಗೋಡಂಬಿ ತಿನ್ನುವುದರಿಂದ ದೇಹದ ತೂಕವನ್ನು ಕಡಿಮೆ ಮಾಡಿಕೊಳ್ಳಬಹುದು. ಗೋಡಂಬಿಯಲ್ಲಿ ಪ್ರೊಟೀನ್, ವಿಟಮಿನ್, ಖನಿಜಗಳು ಹಾಗೂ ಮಿನರಲ್ಸ್ ಗಳು ಹೇರಳವಾಗಿವೆ. ರೋಗ ನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಗೋಡಂಬಿಯ ಪಾತ್ರ ಮಹತ್ವದ್ದು.

ಗೋಡಂಬಿಯನ್ನು ತಿನ್ನುವುದರಿಂದ ಹೃದಯದ ಸ್ನಾಯುಗಳು ಬಲವಾಗುತ್ತವೆ. ಇದು ಹೃದಯದ ಆರೋಗ್ಯವನ್ನು ಕಾಪಾಡುತ್ತದೆ. ಕ್ಯಾಲ್ಸಿಯಂ ಮೆಗ್ನಿಶಿಯಮ್ ಹಾಗೂ ಪೊಟ್ಯಾಷಿಯಂ ಇರುವುದರಿಂದ ಮೂಳೆ ಕಾಯಿಲೆಗಳ ವಿರುದ್ಧ ಹೋರಾಡುತ್ತದೆ. ಗೋಡಂಬಿಯಲ್ಲಿ ವಿಟಮಿನ್ ಕೆ ಇರುವುದರಿಂದ ಇದು ಮೂಳೆಗಳಿಗೆ ಸಂಬಂಧಿಸಿದ ಕಾಯಿಲೆಗಳನ್ನು ತಡೆಗಟ್ಟುತ್ತದೆ.

ಕಣ್ಣುಗಳನ್ನು ಹಾಗೂ ಕಣ್ಣಿನ ಪೊರೆಗಳನ್ನು ರಕ್ಷಿಸಲು ಗೋಡಂಬಿ ಸಹಕರಿಸುತ್ತದೆ. ಗೋಡಂಬಿ ದಿನನಿತ್ಯ ತಿಂದರೆ ಒಳ್ಳೆಯದು. ಬಾದಾಮಿ ಗೋಡಂಬಿಗಳನ್ನು ಬೆಳಿಗ್ಗೆ ತಿಂಡಿಗೆ ಮುನ್ನ ತಿನ್ನುವುದರಿಂದ ದೇಹದ ತೂಕವನ್ನು ಇಳಿಸಿಕೊಳ್ಳಬಹುದು. ಗೋಡಂಬಿ ಸೇವನೆ ಮಾಡಿದರೆ ಮಿನರಲ್ಸ್ ಹಾಗೂ ವಿಟಮಿನ್ ಗಳು ದೇಹಕ್ಕೆ ಹೇರಳವಾಗಿ ಸಿಗುತ್ತವೆ.

# ಕೆಎಲ್‌ಇ ಸಂಸ್ಥೆಯು ನೂತನ ಆಸ್ಪತ್ರೆ ಉದ್ಘಾಟನೆ




ಬೆಳಗಾವಿ: ಜನರ ಮನೆಬಾಗಿಲಿಗೆ ಆರೋಗ್ಯ ಸೇವೆಯನ್ನು ಕಲ್ಪಿಸುವ ಉದ್ದೇಶದಿಂದ ನಗರ ಮತ್ತು ಇನ್ನಿತರ ಪ್ರದೇಶಗಳಲ್ಲಿ ಕೆಎಲ್‌ಇ ಆಸ್ಪತ್ರೆಯನ್ನು ತೆರೆಯಲಾಗುತ್ತಿದೆ. ಈಗಾಗಲೇ ಬೆಳಗಾವಿ ನಗರದಲ್ಲಿ ನಾಲ್ಕು ಕೇಂದ್ರಗಳನ್ನು ತೆರೆದು ಜನಸೇವೆಗೆ ಅರ್ಪಿಸಲಾಗಿದೆ. ಈಗ ಉಜ್ವಲ ನಗರದಲ್ಲಿ ಪ್ರಾರಂಭಿಸಿದ್ದು, ಜನರು ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ. ಪ್ರಭಾಕರ ಕೋರೆ ಅವರಿಂದಿಲ್ಲಿ ಕರೆ ನೀಡಿದರು.

ಬೆಳಗಾವಿಯ ಉಜ್ವಲ ನಗರದಲ್ಲಿ ಕೆ-ಎಲ್‌ಇ ಸಂಸ್ಥೆಯು ನೂತನವಾಗಿ ನಿರ್ಮಿಸಿದ ಆಸ್ಪತ್ರೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದಿಂದ ಸಮಾಜ ಸುಧಾರಣೆ ಸಾಧ್ಯ. ಅದಕ್ಕನುಗುಣವಾಗಿ ಶಿಕ್ಷಣದ ಜೊತೆಗೆ ಆರೋಗ್ಯ ಕಲ್ಪಿಸುವ ಕಾರ್ಯ ಅದರಲ್ಲಿಯೂ ಮನೆಬಾಗಿಲಿಗೆ ತಲುಪಿಸಲಾಗುತ್ತಿದೆ. ಸಕಲ ವ್ಯವಸ್ಥೆಯನ್ನುಳ್ಳ ಅತ್ಯಾಧುನಿಕ ಆಸ್ಪತ್ರೆ ಇದೆ. ಕೈಗೆಟಕುವ ದರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕಿಡ್ನಿ, ಹೃದಯ, ಲೀವರ ಕಸಿ ಮಾಡಲಾಗುತ್ತಿದ್ದು, ಶೀಘ್ರದಲ್ಲಿಯೇ ಲಂಗ(ಶ್ವಾಸಕೋಶ) ಕಸಿ ಕೈಗೆಟಕುವ ದರದಲ್ಲಿ ನೆರವೇ-ರಿಸಲಾಗುತ್ತದೆ. ಇದಕ್ಕಾಗಿಯೇ ಆಸ್ಪತ್ರೆಯ ವೈದ್ಯರೊಬ್ಬರನ್ನು ತರಬೇತಿಗೆ ಅಮೇ-ರಿಕಾಗೆ ಕಳಹಿಸಲಾಗಿದೆ ಎಂದು ತಿಳಿಸಿದರು.

ಪ್ರತಿದಿನ ಸುಮಾರು 10 ರೋಗಿಗಳು ಕ್ಯಾನ್ಸರನಿಂದ ಬಳಲುತ್ತಿರುವದು ಕಂಡು ಬರುತ್ತಿರುವದರಿಂದ ಬೆಳಗಾವಿಯಲ್ಲಿ 300 ಹಾಸಿಗೆಗಳ ಕ್ಯಾನ್ಸರ ಆಸ್ಪತ್ರೆಯನ್ನು ಪ್ರಾರಂಭಿಸಲಾಗುತ್ತಿದೆ. ಅತ್ಯಾಧುನಿಕ ಯಂತ್ರೋಪಕರಣಗಳನ್ನು ಹೊಂದಿರುವ ಆಸ್ಪತ್ರೆಯು ಶೀಘ್ರದಲ್ಲಿಯೇ ಜನಸೇವೆಗೆ ಅರ್ಪಿತವಾಗಲಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಕಾರ್ಯನಿರ್ವಹಿಸುವ ಸಂಸ್ಥೆಯ ಆಸ್ಪತ್ರೆಯಲ್ಲಿ ಯಾವುದೇ ಜಾತಿ ಧರ್ಮ ನೋಡದೇ ಸಕಲರಿಗೆ ಶಿಕ್ಷಣ ಹಾಗೂ ಚಿಕಿತ್ಸೆ ನೀಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ನಮ್ಮ ಆಹಾರ, ಜೀವನ ಶೈಲಿ ಬದಲಾವಣೆಯಿಂದ ರೋಗಗಳು ಅಧಿಕಗೊಳ್ಳುತ್ತಿವೆ. ಆದ-ರಿಂದ ಪರ್ಯಾಯ ವ್ಯವಸ್ಥೆಯಡಿ ಆಯುರ್ವೇದ, ಹೋಮಿಯೋಪತಿ ಆಸ್ಪತ್ರೆ. ತೆರೆಯಲಾಗಿದೆ. ಅಲ್ಲದೇ ಮನೆಬಾಗಿಲಿಗೆ ಬಂದು ರೋಗಿಗಳ ಸೇವೆಯನ್ನು ಮಾಡಲಾಗುತ್ತಿದೆ. ಎಲ್ಲರೂ ಆರೋಗ್ಯದಿಂದ ಇರಿ ಎಂದು ಸಲಹೆ ನೀಡಿದರು.

ಶಾಸಕ ರಾಜು (ಆಸಿಫ್) ಸೇಠ ಅವರು ಮಾತನಾಡಿ, ಡಾ. ಕೋರೆ ಅವರ ದೂರದೃಷ್ಟಿ ಅಗಧವಾದದ್ದು. ಬಹಳ ದಿನಗಳಿಂದ ನಮಗೆ ಕೆ-ಎಲ್‌ಇ ಆಪದ್ಬಾಂಧವ. ಆಸ್ಪತ್ರೆ ಎಂದರೆ ಭಯಬೇಡ. 2013ರಲ್ಲಿ ನನಗೆ ಗಂಭೀರ ಪರಿಸ್ಥಿತಿ ಎದುರಾಗಿ-ತ್ತು. ತುರ್ತು ಹೃದಯ ಶಸ್ತ್ರಚಿಕಿತ್ಸೆ ನಡೆಸಬೇಕಾಗಿತ್ತು. ಎಲ್ಲರೂ ಮುಂಬೈ, ಬೆಂಗಳೂರು, ಹೈದರಾಬಾದ ಅಮೇ-ರಿಕಾಗೆ ಹೋಗುವಂತೆ ಸಲಹೆ ನೀಡಿದರು. ಆದರೆ ಡಾ. ಕೋರೆ ಅವರು ಇಲ್ಲಿಯೇ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು. ಈಗ ನಾನು ಗುಣಮುಖಗೊಂಡು ನಿಮ್ಮ ಮುಂದೆ ಇದ್ದೇನೆ. ಇದನ್ನು ಹೇಳುವ ಉದ್ದೇಶ ಏನೆಂದರೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಚಿಕಿತ್ಸೆ ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆಯಲ್ಲಿ ಲಭಿಸುತ್ತಿದೆ ಎಂದರ್ಥ ಎಂದು ಪ್ರಶಂಸಿಸಿದರು.

ವೇದಿಕೆ ಮೇಲೆ ಕೆಎಲ್‌ಇ ಸಂಸ್ಥೆಯ ನಿರ್ದೇಶಕರಾದ ಡಾ. ಎಸ್ ವಿ ಸಾಧುನವರ, ಕಾಹೆರನ ಉಪಕುಲಪತಿ ಡಾ. ನಿತಿನ ಗಂಗಾನೆ ಉಪಸ್ಥಿತ-ರಿದ್ದರು. ಸಮಾರಂಭದಲ್ಲಿ ಕಾಹೆರ ಕುಲಸಚಿವ ಡಾ. ಎಂ ಎಸ್ ಗಣಾಚಾರಿ, ಡಾ. ವಿ ಡಿ ಪಾಟೀಲ, ಡಾ. ಹೆಚ್ ಬಿ ರಾಜಶೇಖರ, ಉಪಪ್ರಾಚಾರ್ಯರಾದ ಡಾ. ವಿ ಎಂ ಪಟ್ಟಣಶೆಟ್ಟಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ಡಾ ವೈದ್ಯಕೀಯ ಅಧೀಕ್ಷಕರಾದ ಡಾ. ಆರಿಫ್ ಮಾಲ್ದಾರ ಸ್ವಾಗತಿಸಿದರು. ಜೆಎನ‌ಎಂಸಿ ಉಪಪ್ರಾಚಾರ್ಯ ಡಾ. ರಾಜೇಶ ಪವಾರ ವಂದಿಸಿದರು.

## ತೋಟಗಾರಿಕೆ ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಶಿವಮೊಗ್ಗ: ತೋಟಗಾರಿಕೆ ಇಲಾಖೆಯು 2024-25 ನೇ ಸಾಲಿನಲ್ಲಿ ರೈತರ ಮಕ್ಕಳಿಗಾಗಿ ನಡೆಸುವ 10 ತಿಂಗಳ ತರಬೇತಿಯನ್ನು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಹೊಸೂರು ತೋಟಗಾರಿಕ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ್ದು, ಶಿವಮೊಗ್ಗ ಜಿಲ್ಲೆಯ ಆಸಕ್ತ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ನಿಗದಿತ ನಮೂನೆ ಅರ್ಜಿಗಳನ್ನು ತೋಟಗಾ-ರಿಕೆ ಇಲಾಖೆಯ ವೆಬ್ ಸೈಟ್ **https://horticulturedir.karnataka.gov.in** ನಿಂದ ಡೌನ್ಲೋಡ್ ಮಾಡಿಕೊಂಡು ಅಥ-ವಾ ಶಿವಮೊಗ್ಗ ಜಿಲ್ಲೆಯ ಹಿರಿಯ ಸಹಾಯಕ ತೋಟಗಾ-ರಿಕೆ ನಿರ್ದೇಶಕರು ಶಿವಮೊಗ್ಗ ಕಛೇರಿಯಿಂದ ಅಥವಾ ಆಯಾ ತಾಲೂಕಿನ ತೋಟಗಾರಿಕೆ ಕಛೇರಿಯಿಂದ ಪಡೆದು, ಭರ್ತಿ ಮಾಡಿದ ಅರ್ಜಿಯೊಂದಿಗೆ ಸೂಕ್ತ ದಾಖಲೆಗಳನ್ನು ಏ.01 ರೊಳಗಾಗಿ ಆಯಾ ಸಂಬಂಧ ಪಟ್ಟ ಕಛೇರಿಗಳಿಗೆ ಸಲ್ಲಿಸುವಂತೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ತರಬೇತಿಗೆ ಅರ್ಹತೆಗಳು ಎಸ್.ಎಸ್.ಎಲ್.ಸಿಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಅಭ್ಯರ್ಥಿಯ ತಂದೆ/ತಾಯಿ/ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿದ್ದು, ಸ್ವಂತ ಸಾಗುವಳಿ ಮಾಡುತ್ತಿರಬೇಕು. ಹೆಚ್ಚಿನ ವಿವರಗಳಿಗೆ ದೂ. ಸಂ.: 08182-222794/6986950460 ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ರಾಜ್ಯವಲಯ ಶಿವಮೊಗ್ಗ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಶಿಕ್ಷಣ ಅಂಕಗಳಿಗೆ ಮಾತ್ರ ಸೀಮಿತವಾಗಬಾರದು



ಕೆಂಭಾವಿ: ಶಿಕ್ಷಣದ ಜೊತೆ ಶಿಸ್ತು, ಸಂಂ-ಯಮದ ಪಾಠವನ್ನು ಕಲಿಸುವ ಜವಾಬ್ದಾರಿ ಶಿಕ್ಷಕರ ಹಾಗೂ ಪಾಲಕರ ಮೇಲಿದೆ ಎಂದು ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಮಿಟಿ ಸದಸ್ಯ ರಾಘವೇಂದ್ರ ಕಾಮನಟಗಿ ಹೇಳಿದರು.

ಪಟ್ಟಣದ ಸಮೀಪ ಕೂಡಲಗಿಯ ಪ್ರಗತಿ ಕಿ ಪ್ರಾಥಮಿಕ ಶಾಲೆಯ ಹತ್ತನೇ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ಕೇವಲ ಅಂಕ ಗಳಿಸಲು ಮಾತ್ರ ಓದಬಾರದು. ಶಿಕ್ಷಣದಿಂದ ಜೀವನದ ಪಾಠವನ್ನು ಕಲಿಯುವಂತಾಗಬೇಕು. ಪಾಲಕರು ಸಹ ಎಲ್ಲ ಹೊರೆಯನ್ನು ಶಾಲೆಗಳ ಮೇಲೆ ಹಾಕದೆ ಮನೆಯಲ್ಲೂ ವಿದ್ಯಾರ್ಥಿಗಳಿಗೆ ಸಲಹೆ, ಸೂಚನೆಗಳನ್ನು ನೀಡುತ್ತಾ ಇರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಪರಮಪೂಜ್ಯ ಉಮಾಕಾಂತ ಬಾಬಾ ಮಹಾರಾಜರು ಮೌಲ್ಯಯುತ ಶಿಕ್ಷಣದ ಜೊತೆ ಉತ್ತಮ ಸಂಸ್ಕಾರವನ್ನು ಶಾಲೆಗಳು ಒದಗಿಸಬೇಕು. ಪಠ್ಯದ ಜೊತೆಯಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸುವಂತೆ ಶಿಕ್ಷಕರು ಪ್ರೇರೇಪಿಸಬೇಕು ಎಂದು ನುಡಿದರು.

ಶಿಕ್ಷಕ ಮಲ್ಲನಗೌಡ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕಿ ಭಾಗ್ಯಶ್ರೀ ವರದಿ ವಾಚನ ಮಾಡಿದರು. ಮೃತಗೌಡ ಪೊಲೀಸಪಾಟೀಲ ಅಧ್ಯಕ್ಷತೆ ವಹಿಸಿದ್ದರು. ನಾರಾಯಣರಾವ ಕುಲಕರ್ಣಿ, ಸಂಗನಗೌಡ ಮೇಟಿ, ಸಂಸ್ಥೆಯ ಅಧ್ಯಕ್ಷ ಕಾಶಿರಾಯಗೌಡ ಮೇಟಿ, ಕಾರ್ಯದರ್ಶಿ ರಾಘವೇಂದ್ರ ಕುಲಕರ್ಣಿ ಸೇರಿದಂತೆ ಶಿಕ್ಷಕ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪಾಲಕ-ರಿದ್ದರು.ಮುಖ್ಯಗುರು ಪ್ರಾಣೇಶ ಜೋಷಿ ಸ್ವಾಗತಿಸಿದರು. ಸಂಜೀವ ಜೋಷಿ ನಡಕೂರ ನಿರೂಪಿಸಿದರು. ವೆಂಕಟೇಶ ಕುಲಕರ್ಣಿ ವಂದಿಸಿದರು.

# ಬೆಳಗುಂದಿ, ಉಚಗಾಂವ್ ಗ್ರಾಮದಲ್ಲಿ ಡಿಗ್ರಿ ಕಾಲೇಜಿಗೆ ಪ್ರಯತ್ನ: ಲಕ್ಷ್ಮೀ ಹೆಬ್ಬಾಳಕರ್



ಬೆಳಗಾವಿ : ಬೆಳಗಾವಿ ಗ್ರಾಮೀಣ ಕ್ಷೇತ್ರದ ಬೆಳಗುಂದಿ ಮತ್ತು ಉಚಗಾಂವ್ ಗ್ರಾಮದಲ್ಲಿ ಪದವಿ ಕಾಲೇಜು ಆರಂಭಿಸುವ ಕನಸು ಹೊಂದಿರುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದ್ದಾರೆ.

ಶುಕ್ರವಾರ ಸಂಜೆ ಬೆಳಗಾವಿ ಗ್ರಾಮೀಣ ಕ್ಷೇತ್ರದ ಬೆಳಗುಂದಿ ಗ್ರಾಮದ ಶ್ರೀ ಬ್ರಹ್ಮಲಿಂಗ ಯುವಕ ಮಂಡಳದ ಆಶ್ರಯದಲ್ಲಿ ನಡೆದ ಎತ್ತಿನ ಚಕ್ಕಡಿ ಓಡಿಸುವ ಸ್ಪರ್ಧೆಯಲ್ಲಿ (ಬೈಲಗಾಡಿ ಶರ್ಯತ್) ಭಾಗವಹಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಸಾಧ್ಯವಾದಷ್ಟು ಶಿಕ್ಷಣ ಸೌಲಭ್ಯ ಹೆಚ್ಚಿಸಲು ಪ್ರಯತ್ನಿಸುತ್ತೇನೆ. ಮುಂದಿನ 5 ವರ್ಷಗಳ ಕಾಲ ಶೈಕ್ಷಣಿಕ ಕ್ರಾಂತಿ ಮಾಡುತ್ತೇನೆ. ಬೆಳಗುಂದಿಯಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ರೈತ ಭವನ ನಿರ್ಮಾಣ ಮಾಡಲಾಗುವುದು. ಬ್ರಹ್ಮಲಿಂಗ ದೇವಸ್ಥಾನಕ್ಕೆ 25 ಲಕ್ಷ ರೂ. ಗಳನ್ನು ಒದಗಿಸಲಾಗುವುದು ಎಂದು ಹೆಬ್ಬಾಳಕರ್ ತಿಳಿಸಿದರು.

ಗ್ರಾಮೀಣ ಕ್ಷೇತ್ರದ ಜನರ ಆಶೀರ್ವಾದದಿಂದ ನಾನು ಮಂತ್ರಿಯಾಗಿದ್ದೇನೆ. ನಮ್ಮ ಸರಕಾರ ನುಡಿದಂತೆ ನಡೆಯುತ್ತಿದೆ. ಪಂಚ ಗ್ಯಾರಂಟಿ ಮೂಲಕ ಪ್ರತಿ ಕುಟುಂಬಕ್ಕೆ ನೆರವು ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಹ ನಿಮ್ಮ ಆಶೀರ್ವಾದ ಇರಲಿ ಎಂದು ಅವರು ವಿನಂತಿಸಿದರು.

ಈ ಸಮಯದಲ್ಲಿ ಯುವರಾಜ ಕದಂ, ರಘುನಾಥ್ ಖಂಡೇಕರ್, ಶಿವಾಜಿ ಬೋಕಡೆ, ಶಿವಾಜಿ ಬೆಟಗೇರಿಕರ್, ಸೋಮನ್ನ ಗಾವುಡಾ, ರೆಹಮಾನ್ ತಹಶಿಲ್ದಾರ, ಪ್ರಹ್ಲಾದ ಚಿರಮುರ್ಕರ್, ರವಿ ನಾಯಕ್, ಯಲ್ಲಪ್ಪ ಬೆಳಗಾಂವ್ಕರ್, ಅಶೋಕ ಗಾವುಡಾ, ರಂಜನಾ ಗಾವುಡಾ, ಬಾಳು ದೇಸೂರಕರ್, ಉಮೇಶ ಪಾಟೀಲ, ವನಿತಾ ಪಾಟೀಲ, ನಿಂಗೂಲಿ ಚವ್ಹಾನ್, ಶಿವಾಜಿ ಪಾಟೀಲ, ಸವಿತಾ ತಳವಾರ, ಗುರುನಾಥ ಪಾಟೀಲ, ಸುಖದೇವಿ ಕಾಂಬಳೆ, ಮಹಾದೇವ್ ಪಾಟೀಲ, ಮನೋಹರ್ ಬೆಳಗಾಂವ್ಕರ್ ಇದ್ದರು.

## ಮಾಳಿಂಗರಾಯರ ಮೂರ್ತಿ ಕಳುವು: ಆರೋಪಿ ಬಂಧನ

ಕೆಂಭಾವಿ: ಪೊಲೀಸರಿಗೆ ದೊಡ್ಡ ತಲೆನೋವಾಗಿದ್ದ ಸಮೀಪದ ಮಾಲಹಳ್ಳಿ ಗ್ರಾಮದ ಮಾಳಿಂಗರಾಯ ದೇವರ ಮೂರ್ತಿ ಕಳವು ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಲಬುರಗಿ ಮೂಲದ ಈರಣ್ಣ ಗೊಡಕೆ (22) ಎಂಬ ಆರೋಪಿಯನ್ನು ಬಂಧಿಸಿ 13 ಗ್ರಾಂ ದೇವರ ಬಂಗಾರದ ಕಣ್ಣುಗಳು ಸೇರಿ ಇನ್ನಿತರ ಆಭರಣ ಪ್ರಕರಣಕ್ಕೆ ಬಳಿಸಿದ ರಾಯಲ್ ಎನ್ ಫೀಲ್ಡ್ ವಾಹನ ಒಳಗೊಂಡಂತೆ 3.58 ಲಕ್ಷ ಮೌಲ್ಯದ ವಸ್ತುಗಳನ್ನು ಆರೋಪಿಯಿಂದ ಜಪ್ತಿ ಮಾಡಿಕೊಳ್ಳಲಾಗಿದೆ.

ಕೆಂಭಾವಿ ಪೊಲೀಸ್ ಠಾಣೆ ವ್ಯಾಪ್ತಿಯ ದಕ್ಷಿಣ ಕಾಶಿ ಪ್ರಖ್ಯಾತಿಯ ಮಾಳಹಳ್ಳಿ ಗ್ರಾಮದಲ್ಲಿನ ಶ್ರೀ ಮಾಳಿಂಗರಾಯರ ದೇವರ ಬೆಳ್ಳಿಯ ಮೂರ್ತಿ ಮತ್ತು 60 ಗ್ರಾಂ. ಬಂಗಾರದ ಆಭರಣಗಳು ಸೇರಿದಂತೆ ಅಂದಾಜು 5.80ಲಕ್ಷ ರು. ಮೌಲ್ಯದ ವಸ್ತುಗಳು ಡಿ.14 ರ ಬೆಳಗಿನ ಜಾವ ಕಳ್ಳತನವಾಗಿತ್ತು ಈ ಕುರಿತು ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಚಿಕ್ಕ ಸುಳಿವು ಸಿಗದ ಕಾರಣ ಪೊಲೀಸರಿಗೆ ತಲೆ ನೋವಾಗಿ ಪರಿಣಮಿಸಿತ್ತು.

ಪ್ರಕರಣ ಭೇದಿಸಲು ಎಸ್ಪಿ ಜಿ ಸಂಗೀತಾ, ಹೆಚ್ಚುವರಿ ಎಸ್ಪಿ ಧರಣೇಶ ಹಾಗೂ ಡಿವೈ-ಎಸ್ಪಿ ಜಾವೀದ್ ಇನಾಮದಾರ ಅವರ ಮಾರ್ಗದರ್ಶನದಲ್ಲಿ ರಚಿಸಲಾಗಿದ್ದ ಸಿಪಿಐ ಸಚಿನ್ ಚಲವಾದಿ ನೇತೃತ್ವದ ಪಿಎಸ್ ಐ ರಾಜಶೇಖರ ರಾಠೋಡ್ ಒಳಗೊಂಡ ತಂಡ ಸುದೀರ್ಘ ತನಿಖೆ ನಡೆಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಂಡದಲ್ಲಿದ್ದ ಪಿಎಸ್ ಐ ರಾಜಶೇಖರ್ ರಾಠೋಡ್, ಮಾಣಿಕೆಪ್ಪ, ಪಿಸಿಗಳಾದ ಬಸವರಾಜ, ಬಾಬು ನಾಯ್ಕಲ್, ಪರಮಾನಂದ, ಗುಂಡಪ್ಪ, ಶಿವಪ್ಪ, ಹುಸೇನಿ, ಆನಂದ, ಕಾಶಿನಾಥ, ಮಾಳಪ್ಪ ಅವರ ಕಾರ್ಯಕ್ಕೆ ಎಸ್ಪಿ ಸೇರಿದಂತೆ ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

## ಬೆಳಗಾವಿ ಬೆಲ್ಲದ ಕಾಲೇಜು ವಿದ್ಯಾರ್ಥಿ ಜಹೀರ್ ಅತನೂರು ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆ



ಬೆಳಗಾವಿ: ಬೆಳಗಾವಿಯ ಬಿ.ವಿ. ಬೆಲ್ಲದ ಕಾನೂನು ಮಹಾವಿದ್ಯಾಲಯದ ಹಳೇ ವಿದ್ಯಾರ್ಥಿ ಜಹೀರ್ ಅತನೂರು ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದಾರೆ. ಅವರು ಮೆರಿಟ್ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದ್ದಾರೆ.

ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷ ಡಾ.ಪ್ರಭಾಕರಕೋರೆ, ಬೆಲ್ಲದ ಕಾನೂನು ಮಹಾವಿದ್ಯಾಲಯದ ಆಡಳಿತ ಮಂಡಳಿ ಚೇರ್ಮನ್ ಆರ್ಬಿ.ಬೆಲ್ಲದ, ಪ್ರಾಚಾರ್ಯ ಬಿ. ಜಯಸಿಂಹ, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

# ಮಕ್ಕಳನ್ನು ಸುರಕ್ಷಿತ, ಸಂಸ್ಕಾರಯುತವಾಗಿ ಬೆಳೆಸುವುದು ನಮ್ಮ ನಿಮ್ಮೆಲರ ಕರ್ತವ್ಯ: ಶ್ರೀಕಂಠ ಎನ್.ಎ



ಬೆಳಗಾವಿ: ಮಕ್ಕಳನ್ನು ಸುರಕ್ಷಿತವಾಗಿ ಮತ್ತು ಸಂಸ್ಕಾರಯುತವಾಗಿ ಬೆಳೆಸುವುದು ನಮ್ಮ ನಿಮ್ಮೆಲರ ಆದ್ಯ ಕರ್ತವ್ಯವಾಗಿದೆ. ನಮ್ಮಲ್ಲಿ ಬರುವಂತಹ ಮಕ್ಕಳು ವಿಶೇಷದಲ್ಲಿ ವಿಶೇಷವಾಗಿರುತ್ತಾರೆ. ಅವರನ್ನು ತಿದ್ದಿ ಒಳ್ಳೆಯ ನಾಗರಿಕರನ್ನಾಗಿ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ನಿಮ್ಮೆಲ್ಲರ ಪಾತ್ರ ಪ್ರಮುಖವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಬಾಲನ್ಯಾಯ ಮಂಡಳಿಯ ಪ್ರಧಾನ ದಂಡಾಧಿಕಾ-ರಿಗಳಾದ ಶ್ರೀಕಂಠ ಎನ್. ಎ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಬೆಳಗಾವಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಬೆಳಗಾವಿ ಇವರ ಸಂಂ-ಯುಕ್ತಾಶ್ರಯದಲ್ಲಿ ಸರಕಾರಿ ವೀಕ್ಷಣಾಲಯ ಸಭಾಗೃಹದಲ್ಲಿ ಶುಕ್ರವಾರ (ಮಾ.01) ರಂದು 'ಬಾಲನ್ಯಾಯ ಕಾಯಿದೆ ಮಕ್ಕಳ ಪಾಲನೆ ಮತ್ತು ರಕ್ಷಣೆ 2015 ತಿದ್ದುಪಡಿ 2021 ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಒಳಗೊಂಡತೆ' ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಇಂತಹ ತರಬೇತಿ ಕಾರ್ಯಾಗಾರವು ತುಂಬಾ ಮಹತ್ವವಾಗಿದ್ದು, ಸಂಸ್ಥೆಗಳಲ್ಲಿ ಶಿಸ್ತಿನಿಂದ ಮಕ್ಕಳನ್ನು ಬೆಳೆಸಬೇಕೆಂದರು. ಮಕ್ಕಳ ಹಕ್ಕುಗಳನ್ನು ಮಕ್ಕಳಿಗೆ ಸಿಗುವ ಹಾಗೇ ನಿಮ್ಮೆಲ್ಲರ ಬೆಂಬಲವಿರಬೇಕು. ನಮ್ಮಲ್ಲಿ ಬರುವಂತಹ ಮಕ್ಕಳು ಬೇರೆ ಬೇರೆ ಪ್ರಕರಣಕ್ಕೆ ಒಳಗೊಂಡಿದ್ದು, ಅವರಲ್ಲಿ ತಾರತಮ್ಯ ಮಾಡದೇ, ಹಿಯಾಳಿಸದೇ ಸೂಕ್ಷ್ಮವಾಗಿ ಅವರ ಮನಸ್ಥಿತಿ ಅಥ-ರ್ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಬೇಕು ಎಂದರು.

ಬಾಲನ್ಯಾಯ ಕಾಯ್ದೆಯಲ್ಲಿ ಮೂರು ರೀತಿಯಾದ ಮಕ್ಕಳನ್ನು ಕಾಣುತ್ತೇವೆ. ಮೊದಲನೆಯದಾಗಿ ಪರಿತ್ಯಕ್ತ ಮಗು-ಈ ಮಗು ತಂದೆ-ತಾಯಿಗೆ ಬೇಡವಾದ, ತ್ಯಜಿಸಿದ ಮಗುವಾಗಿರುತ್ತದೆ. ಇಂತಹ ಮಕ್ಕಳನ್ನು ಕಾನೂನಾತ್ಮಕವಾಗಿ ಇಲಾಖೆಯಿಂದ ಅರ್ಹ ದಂಪತಿಗಳಿಗೆ ದತ್ತು ನೀಡಲಾಗುತ್ತದೆ. ಎರಡನೆಯದಾಗಿ ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಗು-ಇಲ್ಲಿ 18 ವರ್ಷದೊಳಗಿನ ಮಗು ಕಾನೂನಿನ ವಿರುದ್ಧವಾಗಿ ತಪ್ಪು ಮಾಡಿದಲ್ಲಿ ಬಾಲನ್ಯಾಯ ಮಂಡಳಿ ಮುಂದೆ ಹಾಜರುಪಡಿಸಲಾಗುತ್ತದೆ. ಕೊನೆಯದಾಗಿ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಮಗು, ಅನಾಥ, ಏಕಪೋಷಕ, ಬಾಲ್ಯವಿವಾಹಕ್ಕೊಳಗಾದ ಮಗು, ಬಾಲಕಾರ್ಮಿಕ, ಪೋಕ್ಸೋ, ಕುಟುಂಬದಲ್ಲಿ ಶಿಕ್ಷಣಕ್ಕೆ ಬೆಂಬಲವಿಲ್ಲದ ಮಗು, ಭೀಕರ ಕಾಯಿಲೆಗೆ ಒಳಗಾದ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿ, ಅವರಿಗೆ ಅವಶ್ಯವಿರುವ ಯೋಜನೆ ಸೌಲಭ್ಯ ನೀಡಬೇಕೆ ಎಂದು ಸೂಚಿಸಿದರು.

ಇಂದು ವಿಶೇಷವಾಗಿ ವಿಶ್ವ ತಾರತಮ್ಯ ದಿನವಾಗಿ ಆಚರಿಸುತ್ತಿದ್ದು, ನೀವು ಕೆಲಸ ಮಾಡುವ ಸ್ಥಳದಲ್ಲಿ ಹಾಗೂ ನಿಮ್ಮ ಜೀವನದಲ್ಲಿ ತಾರತಮ್ಯತೆಯನ್ನು ಹೋಗಲಾಡಿಸಿ, ಕರ್ತವ್ಯ ನಿರ್ವಹಿಸಿ ನಮ್ಮ ಬಾಲನ್ಯಾಯ ಕಾಯ್ದೆಯಲ್ಲಿ ಕಾಲಕಾಲಕ್ಕೆ ಅನುಗುಣವಾಗಿ ಕಾಯ್ದೆಗಳು ಬದಲಾವಣೆಗೊಂಡಲ್ಲಿ ಇಲಾಖೆಯವರು ಸಿಬ್ಬಂದಿಗಳಿಗೆ ತರಬೇತಿಗಳನ್ನು ನೀಡುತ್ತಿರುತ್ತಾರೆ ತಾವು ಅದರ ಸದುಪಯೋಗ ಪಡೆದುಕೊಂಡು ಆ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು ಎಂದರು.

ಮಕ್ಕಳ ವಿಶೇಷ ಪೋಲಿಸ್ ಘಟಕದ ನೋಡಲ್ ಅಧಿಕಾರಿ ಹಾಗೂ ಪೊಲೀಸ್ ಉಪ ಆಯುಕ್ತರಾದ ಪಿ ವಿ ಸ್ನೇಹಾ ಮಾತನಾಡಿ, ಪೋಲೀಸ್ ಅಧಿಕಾ-ರಿಗಳು ಹಾಗೂ ಸಿಬ್ಬಂದಿಯವರು ಮಕ್ಕಳ ಸ್ನೇಹಿಯಾಗಿರುತ್ತಾರೆ. ಅಂತಹ ವಾತಾವರಣವನ್ನು ಬೆಳಗಾವಿ ನಗರ ಆಯುಕ್ತಾಲಯದ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿದೆ. ಮಕ್ಕಳ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ತುರ್ತಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಇದಕ್ಕೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ನಮ್ಮ ಪ್ರತಿ ಪೋಲೀಸ್ ಠಾಣೆಗಳಿಗೆ ಭೇಟಿ ನೀಡಿ ಸೂಕ್ತ ಮಾರ್ಗದರ್ಶನ ನೀಡುವದರೊಂದಿಗೆ ಮಕ್ಕಳ ಸ್ನೇಹಿ ಪೋಲೀಸ್ ಠಾಣೆಗಳ ನಿರ್ಮಾಣದಲ್ಲಿ ಕೈಜೋಡಿಸಿರುವದು ಶ್ಲಾಘನಿಯ ಎಂದರು.

## ಮಾ.3 ರಂದು ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕೆ ಕಾರ್ಯಕ್ರಮ

ಬೆಳಗಾವಿ: ರಾಷ್ಟೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದ ಅಡಿಯಲ್ಲಿ ರವಿವಾರ (ಮಾ.3) ರಂದು 5 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕುವ ಅಭಿಯಾನವನ್ನು ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗಿದೆ.ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸುವದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮಹಾನಗರ ಪಾಲಿಕೆ ಆಯುಕ್ತರು ಸಾರ್ವಜನಿಕರಲ್ಲಿ ಮನವಿ ಮಾಡಿರುತ್ತಾರೆ.

ಮಾ.4 ರಿಂದ 6 ರವರೆಗೆ ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ ಪೋಲಿಯೊ ಲಸಿಕೆ ನೀಡುತ್ತಾರೆ. ಈ ಹಿಂದೆ ಲಸಿಕೆ ಹಾಕಿಸಿದ್ದರೂ ಸಹ ಮತ್ತೊಮ್ಮೆ ಪೋಲಿಯೊ ಲಸಿಕೆ ಹಾಕಿಸಲು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## 6ನೇ ತರಗತಿ ವಸತಿ ಶಾಲೆಗಳಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಬೆಳಗಾವಿ: 2024-25 ನೇ ಸಾಲಿನ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಳಗಾವಿ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ 6ನೇ ತರಗತಿ ಪ್ರವೇಶ ಪಡೆಯಲು ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ವಿದ್ಯಾರ್ಥಿಗಳು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಹಾಗೂ ಪಾಲಕರು ಮಾ.15 ಒಳಗಾಗಿ ಆನ್‌ಲೈನ್‌ನಲ್ಲಿ ಸೇವಾ ಸಿಂಧು ಪೋರ್ಟಲ್ http://sevasindhuservices.karnataka.gov.in ಲಿಂಕ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ಸಂಪರ್ಕಿಸಬಹುದು.

ಉಚಿತವಾಗಿ ಸೇವೆಗಳನ್ನು ಪಡೆಯಲು ತಮ್ಮ ಸಮೀಪದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಬಹುದು.

ಆಫ್‌ಲೈನ್ ಮೂಲಕ ಅರ್ಜಿಗಳನ್ನು ಸ್ವಿಕರಿಸುವುದಿಲ್ಲ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾ-ರಿಗಳಾದ ಡಾ. ಅಬ್ದುಲರಶೀದ ಎಮ್ ಮಿರ್ಜನ್ನವರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ

ಶಿವಮೊಗ್ಗ: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ, ಶಿವಮೊಗ್ಗ ಇವರುಗಳ ಸಂಯುಕ್ತಾಶ್ರಯದಲ್ಲಿ ಮಾ. 04 ಮತ್ತು 05 ರಂದು ನಗರದ ನೆಹರೂ ಕ್ರೀಡಾಂಗಣದಲ್ಲಿ 2023-24ನೇ ಸಾಲಿನ ಶಿವಮೊಗ್ಗ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಂಸ್ಕೃತಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮಾ. 04 ರಂದು ಬೆಳಗ್ಗೆ 10.00ಕ್ಕೆ ನೆಹರೂ ಕ್ರೀಡಾಂಗಣದಲ್ಲಿ ಏರ್ಪಡಿಲಾಗಿದ್ದು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಉದ್ಘಾಟಿಸಲಿರುವರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವ ಬಿ. ನಾಗೇಂದ್ರ ಕ್ರೀಡಾ ಜ್ಯೋತಿ ಸ್ವೀಕರಿಸಲಿರುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿವಮೊಗ್ಗ ಶಾಸಕ ಎಸ್. ಎನ್. ಚನ್ನಬಸಪ್ಪ ವಹಿಸಲಿದ್ದಾರೆ.

ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ.ಸುಧಾಕರ್‌ರವರ ಗೌರವ ಉಪಸ್ಥಿತಿ ಇರಲಿದೆ. ಸಂಸದ ಬಿ.ವೈ. ರಾಘವೇಂದ್ರ ಧ್ವಜಾರೋಹಣ ಮಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ವಿಧಾನಸಭಾ ಮತ್ತು ವಿಧಾನ ಪರಿಷತ್ ಶಾಸಕರು, ಪಾಲಿಕೆ ಮಹಾಪೌರರು, ಜನಪ್ರತಿನಿಧಿಗಳು, ವಿವಿಧ ನಿಗಮ, ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರು, ಜಿಲ್ಲೆಯ ಎಲ್ಲಾ ಗೌರವಾನ್ವಿತ ಜನಪ್ರತಿನಿಧಿಗಳು, ರಾ.ಸ.ನೌ ಸಂಘದ ಅಧ್ಯಕ್ಷರು, ಜಿಲ್ಲಾ ಮತ್ತು ತಾಲೂಕು ಸ.ನೌ.ಸಂಘದ ಅಧ್ಯಕ್ಷರುಗಳು/ಪದಾಧಿಕಾರಿಗಳು, ಸರ್ಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿ.ಪಂ ಸಿಇಓ, ಜಿ.ಯು.ಸ.&ಕ್ರೀ. ಇಲಾಖೆಯ ಸಹಾಯಕ ನಿರ್ದೇಶಕರು ಮತ್ತು ಇನ್ನಿತರ ಗಣ್ಯರು, ಅಧಿಕಾರಿಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

**ಕರ್ನಾಟಕ ಸರ್ಕಾರ**
**(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)**
**ಕೇದನೂರು ಗ್ರಾಮ ಪಂಚಾಯತಿ**
**ಬೆಳಗಾವಿ ತಾ॥ ಬೆಳಗಾವಿ ಜಿ॥**

ಕ್ರ.ಸಂ.ಗ್ರಾಪಂಕೆದನೂರು/ನರೇಗಾ/2023-24/ಅಲ್ಪಾವಧಿ ಟೆಂಡರ್01/2023-24/ ದಿನಾಂಕ: 02-03-2024

**ಸಾಮಗ್ರಿ ಸರಭರಾಜು ಟೆಂಡರ ಪ್ರಕಟಣೆ (KPPP portal)**

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಕೇದನೂರು ಗ್ರಾಮ ಪಂಚಾಯತಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು **KPPP portal** ವೇದಿಕೆ ಮೂಲಕ ಗ್ರಾಮ ಪಂಚಾಯತ್ ಇಲಾಖೆಯ ಚಾಲ್ತಿ ನೋಂದಾಯಿತ ಸಾಮಗ್ರಿ ಸರಭರಾಜುದಾರರಿಗೆ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಜಿ-1 ರಲ್ಲಿ ಒಟ್ಟು 2 ಕಾಮಗಾರಿಗಳಿಗೆ ಸಾಮಗ್ರಿ ಸರಭರಾಜು ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಅಂದಾಜು ಮೊತ್ತ ರೂ 9.00 ಲಕ್ಷ ಹಾಗೂ ಅದರಂತೆ ಗರಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ ರೂ. 0.225 ಲಕ್ಷ ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. 9.00 ಲಕ್ಷ ಹಾಗೂ ಅದರಂತೆ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ ರೂ. **0.225** ಲಕ್ಷ ಆಗಿರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: 07-03-2024 ಸಂಜೆ 17.28 ರೊಳಗಾಗಿ, ಗುತ್ತಿಗೆದಾರ-ರಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ: 09-03-2024 ಸಂಜೆ 17.30 ಗಂಟೆಯವರೆಗೆ, ಹಾಗೂ ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 11-03-2024 ರಂದು 10.00 ಗಂಟೆಗೆ ಹಾಗೂ ಆರ್ಥಿಕ ಬಿಡ್‌ತೆರೆಯುವ ದಿನಾಂಕ: 11-03-2024 ರಂದು 10.30 ಗಂಟೆಗೆ ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www. https://kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/-
**ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು,**
**ಕೆದನೂರು ಹಡಿನ ಪಂಚಾಯತಿ**
**ಬೆಳಗಾವಿ ತಾ॥: ಬೆಳಗಾವಿ ಜಿ॥**

# ಒಡೆದ ಮನಸ್ಸುಗಳನ್ನು ಕಟ್ಟುವ ಕೆಲಸ ಕಾಂಗ್ರೆಸ್ ಸರಕಾರದಿಂದ ನಡೆಯುತ್ತಿದೆ: ಲಕ್ಷ್ಮೀ ಹೆಬ್ಬಾಳಕರ್

ಹಿರೇಬಾಗೇವಾಡಿ (ಬೆಳಗಾವಿ): ರಾಜ್ಯದ ಕಾಂಗ್ರೆಸ್ ಸರಕಾರದ ಒಡೆದ ಮನಸ್ಸುಗಳನ್ನು ಕಟ್ಟುವ ಕೆಲಸ ಮಾಡುತ್ತಿದ್ದು, ಇದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದ್ದಾರೆ.

ಕೆರೆ ತುಂಬಿಸುವ ಯೋಜನೆಗೆ ಸರ್ಕಾರದಿಂದ 800 ಕೋಟಿ ರೂ,ಗಳ ಅನುದಾನ ಬಿಡುಗಡೆ ಮಾಡಿಸಿರುವ ಹಿನ್ನೆಲೆಯಲ್ಲಿ ಬೆಳಗಾವಿ ಗ್ರಾಮೀಣ ಕ್ಷೇತ್ರದ ಹಿರೇಬಾಗೇವಾಡಿಯಲ್ಲಿ ಶನಿವಾರ ಬ್ಲಾಕ್ ಕಾಂಗ್ರೆಸ್ ಹಾಗೂ ಸುತ್ತಮತ್ತಲಿನ ಗ್ರಾಮಸ್ಥರು ಆಯೋಜಿಸಿದ್ದ ಸತ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿರೇಬಾಗೇವಾಡಿ ಗ್ರಾಮಕ್ಕೆ ಕೆರೆ ತುಂಬಿಸುವ ಯೋಜನೆ ತರಬೇಕೆಂದು 2018ರಿಂದ ತಾವು ನಡೆಸಿದ ಹೋರಾಟ, ಯೋಜನೆ ಮಂಜೂರಾಗಿ, ಕಾಮಗಾರಿ ಆರಂಭವಾದ ಸಂದರ್ಭದಲ್ಲಿ ಸರಕಾರ ಬದಲಾಗಿ, ಅದಕ್ಕೆ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರು ಅಡ್ಡಿಪಡಿಸಿದ ರೀತಿ, ಅದಕ್ಕೆ ಆಗಿನ 13 ಜನ ಬಿಜೆಪಿಯ ಸಂಸದರು, ಶಾಸಕರು ಸಹಿ ಹಾಕಿ ಯೋಜನೆಯನ್ನೇ ರದ್ದುಪಡಿಸಿದ ಸಂದರ್ಭ ಎಲ್ಲವನ್ನೂ ನೆನಪಿಸಿದ ಲಕ್ಷ್ಮೀ ಹೆಬ್ಬಾಳಕರ್, ಜನರಿಗಾಗಿ ಮಾಡಿದ ಕೆಲಸಕ್ಕೆ ಅಡ್ಡಗಾಲು ಹಾಕುವ ಮನಸ್ಥಿತಿಗಳ ಕುರಿತು ಸಾದ್ಯಂತವಾಗಿ ವಿವರಿಸಿದರು.

ನಾನು ವಿಶ್ವವಿದ್ಯಾಲಯ ಬರುವುದನ್ನು ವಿರೋಧಿಸಿರಲಿಲ್ಲ. ಸ್ವಲ್ಪ ಜಾಗವನ್ನು ಅದಾಗಲೇ ಮಂಜೂರಾಗಿದ್ದ ಕೆರೆತುಂಬಿಸುವ ಯೋಜನೆಗೆ ಬಿಟ್ಟುಕೊಡುವಂತೆ ಕೇಳಿದ್ದೆ. ಆದರೆ ಕೆರೆ ತುಂಬಿಸುವ ಯೋಜನೆ ಬರಲೇಬಾರದೆನ್ನುವ ಹುನ್ನಾರದಿಂದ ಏನೆಲ್ಲ ಮಾಡಿದರು. ನಮ್ಮ ರೈತರನ್ನು ಕುಡುಕರು ಎಂದು ಅವಮಾನ ಮಾಡಿದರು. ರೈತರ ಜಮೀನು ಪಡೆದು, ರೈತರಿಗೇ ನಡೆದಾಡಲು ಜಾಗವಿಲ್ಲದಂತೆ ಮಾಡಿದರು. ಆದರೆ ಎಂತಹ ಕಠಿಣ ಪರಿಸ್ಥಿತಿಯಲ್ಲೂ ಹಿಡಿದ ಕೆಲಸ ಬಿಡದೆ ಯೋಜನೆಯನ್ನು ಮರು ಮಂಜೂರು ಮಾಡಿಸಿದ್ದೇನೆ ಎಂದು ಲಕ್ಷ್ಮೀ ಹೆಬ್ಬಾಳಕರ್ ಅತ್ಯಂತ ಭಾವುಕರಾಗಿ ವಿವರಿಸಿದರು.

ಬಾಗೇವಾಡಿ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನು ಅತ್ಯಂತ ಎತ್ತರಕ್ಕೆ ಒಯ್ಯಬೇಕೆನ್ನುವ ಕನಸು ಇಟ್ಟುಕೊಂಡು ನಾನು ಕೆಲಸ ಮಾಡುತ್ತಿದ್ದೇನೆ. ಯಾರ ಮೇಲೂ ದ್ವೇಷವಾಗಲಿ, ಬೇಸರವಾಗಲಿ ಇಲ್ಲ. ಎಲ್ಲವನ್ನೂ ಅಲ್ಲಲ್ಲೇ ಬಿಟ್ಟು ಮುನ್ನಡೆಯುವ ಸ್ವಭಾವ ನನ್ನದು. ಆದರೆ ಜನರಿಗಾಗಿ ಆಗಬೇಕಾದ ಕೆಲಸವನ್ನು ಉಡು ರೀತಿಯಲ್ಲಿ ಪಟ್ಟುಬಿಡದೆ ಮಾಡಿಸುತ್ತೇನೆ. ರೈತರಿಗೆ, ದನಕರುಗಳಿಗೆ, ಜಮೀನಿಗೆ ಶಾಶ್ವತವಾಗಿ ನೀರು ಒದಗಿಸುವ ಪುಣ್ಯದ ಕೆಲಸವನ್ನು ಮಾಡುತ್ತಿದ್ದೇನೆ. ನಬಾರ್ಡ್ ನಿಂದಲೇ ಯೋಜನೆ ಮಂಜೂರು ಮಾಡಿಸಿಕೊಂಡು ಬಂದಿದ್ದೇನೆ. ಈಗ ಯಾರೂ ಅಡ್ಡಿಪಡಿಸಲು ಸಾಧ್ಯವಿಲ್ಲ. ಜೊತೆಗೇ ವಿಶ್ವವಿದ್ಯಾಲಯವನ್ನೂ ಬೆಳೆಸುತ್ತೇನೆ ಎಂದು ಅವರು ಶಪಥ ಮಾಡಿದರು.



ಈಗಾಗಲೆ ರೈತರಿಗಾಗಿ ರಸ್ತೆ ನಿರ್ಮಾಣ ಮಾಡಲು 9 ಕೋಟಿ ರೂ. ಮಂಜೂರು ಮಾಡಿಸಿದ್ದೇನೆ. ಗ್ರಾಮ ದೇವಿಯ ಜಾತ್ರೆ ಬರುತ್ತಿರುವುದರಿಂದ ಸುತ್ತಲಿನ 14 ದೇವಸ್ಥಾನಗಳ ಸೌಂದರ್ಯೀಕರಣ, ಗ್ರಾಮದ ಅಭಿವೃದ್ಧಿ ಎಲ್ಲವನ್ನೂ ಮಾಡಿಸುತ್ತಿದ್ದೇನೆ. ಹಿರೇಬಾಗೇವಾಡಿ ಜನರೊಂದಿಗೆ ನಾನಿದ್ದೇನೆ. ನನ್ನೊಂದಿಗೆ ನೀವೆಲ್ಲ ಇದ್ದೀರಿ. ಪರಸ್ಪರ ಬಿಟ್ಟು ಇರಲು ಸಾಧ್ಯವಿಲ್ಲ, ಬೇರೆ ಯಾರೂ ಈ ಸ್ಥಾನವನ್ನು ತುಂಬಲು ಸಾಧ್ಯವಿಲ್ಲ. ಕ್ಷೇತ್ರದ ಸುಧಾರಣೆಗಾಗಿ ಎಂತಹ ಪರಿಸ್ಥಿತಿಯನ್ನೂ ಎದುರಿಸಲು ಸಿದ್ಧಳಿದ್ದೇನೆ ಎಂದು ಸಚಿವರು ತಿಳಿಸಿದರು.

ಈ ಹಿಂದೆ ರಾಜ್ಯದಲ್ಲಿ ಆಡಳಿತದಲ್ಲಿದ್ದ ಬಿಜೆಪಿಯವರು ಎಂತಹ ಪರಿಸ್ಥಿತಿಯಲ್ಲಿ ಅಧಿಕಾರ ಬಿಟ್ಟು ಹೋದರು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಮಂಜೂರಾಗಿದ್ದಕ್ಕಿಂತ 2 –3 ಪಟ್ಟು ಹೆಚ್ಚು ಮೊತ್ತದ ವರ್ಕ್ ಆರ್ಡರ್ ಕೊಟ್ಟು ಹೋದರು. ಅವನ್ನೆಲ್ಲ ಕ್ಲಿಯರ್ ಮಾಡುವ ಜೊತೆಗೆ, ನಾವು ಜನರಿಗೆ ವಚನ ಕೊಟ್ಟಿದ್ದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಇಡೀ ರಾಜ್ಯದಲ್ಲಿ ಒಡೆದ ಮನಸ್ಸುಗಳನ್ನು ಕಟ್ಟುವ ಜೊತೆಗೆ ಅಭಿವೃದ್ಧಿಯನ್ನೂ ಮಾಡುತ್ತಿದ್ದೇವೆ. ನಮ್ಮ ಸರಕಾರಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ ಎಂದು ಲಕ್ಷ್ಮೀ ಹೆಬ್ಬಾಳಕರ್ ವಿನಂತಿಸಿದರು.

ಅತ್ಯಂತ ಅಪರೂಪದ ಕಾರ್ಯಕ್ರಮದಲ್ಲಿ ಸಮಗ್ರ ಗ್ರಾಮಸ್ಥರ ಪರವಾಗಿ ಸಚಿವರನ್ನು ಸನ್ಮಾನಿಸಿದ್ದಲ್ಲದೆ, ಪ್ರತಿ ಗ್ರಾಮದ ಜನರೂ ಪ್ರತ್ಯೇಕವಾಗಿಯೂ ಸತ್ಕರಿಸಿದರು. ಅಲ್ಲದೆ ಸಮಾರಂಭದಲ್ಲಿ ಭಾಗವಹಿಸಿದ್ದ ಮಠಾಧೀಶರು ಸಹ ಸಚಿವರ ಕಾರ್ಯವನ್ನು ಪ್ರಶಂಸಿಸಿ, ಸನ್ಮಾನ ಮಾಡಿದರು.

ಬಡೇಕೊಳ್ಳಮಠದ ಶ್ರೀ ನಾಗೇಂದ್ರ ಮಹಾಸ್ವಾಮಿಗಳು, ಮುತ್ನಾಳ ಕೇದಾರ ಶಾಖಾಪೀಠದ ಶ್ರೀ ಶಿವಾನಂದ ಶಿವಾಚಾರ್ಯರು, ಅರಳಿಕಟ್ಟಿಯ ಶ್ರೀ ಶಿವಮೂರ್ತಿ ದೇವರು, ಜಾಲಿಕರೆಮ್ಮ ದೇವಿಯ ಆರಾಧಕರಾದ ಶ್ರೀ ಉಳವಪ್ಪ ಅಜ್ಜನವರು, ಹಿರೇಬಾಗೇವಾಡಿಯ ಅಶ್ರಫ್ ಪೀರ್ ಖಾದ್ರಿ ಅಜ್ಜನವರು, ತಾರಿಹಾಳದ ಶ್ರೀ ಅಡವಿ ಸಿದ್ದೇಶ್ವರ ದೇವರು ಸಮಾರಂಭದ ದಿವ್ಯ ಸಾನಿಧ್ಯವನ್ನು ವಹಿಸಿದ್ದರು.

ಈ ಸಂದರ್ಭದಲ್ಲಿ ಸಿ ಸಿ ಪಾಟೀಲ, ಸುರೇಶ ಇಟಗಿ, ಶ್ರೀಕಾಂತ ಮಾದುಬರಮಣ್ಣವರ್, ಸ್ಮಿತಾ ಪಾಟೀಲ, ಅಡಿವೇಶ ಇಟಗಿ, ಪ್ರಕಾಶ ಜಪ್ತಿ, ಪುಷ್ಪ ನಾಯ್ಕರ್, ಗೌಸಮೊದ್ದಿನ ಜಾಲಿಕೊಪ್ಪ, ಉಷಾತಾಯಿ ಶಿಂತ್ರೆ, ನಿಂಗಪ್ಪ ತಳವಾರ, ರವಿ ಮೇಳೆದ, ಸುರೇಶ ಕಂಬಿ, ಸಮೀನಾ ನದಾಫ್, ಜಗದೀಶ್ ಯಳ್ಳೂರ, ರುದ್ರಗೌಡ ಪಾಟೀಲ, ಬಸವಂತ ನಾಯ್ಕರ್, ನಾಗಪ್ಪ ಬಾಗೇವಾಡಿ, ಸಿದ್ದು ಹಾವಣ್ಣವರ, ಶಿವಾನಂದ ಚಂಡು, ಚಂಬಪ್ಪ ಉಳ್ಳಾಗಡ್ಡಿ ಮೊದಲಾದವರು ಉಪಸ್ಥಿತರಿದ್ದರು.

## ಕರವಸೂಲಿಗಾರರ, ಕ್ಲರ್ಕ/ಕ್ಲರ್ಕ ಕಂ. ಡೇಟಾ ಎಂಟ್ರಿ ಆಪರೇಟರ್ ತಾತ್ಕಾಲಿಕ ಜೇಷ್ಠತಾ ಪಟ್ಟಿ: ಆಕ್ಷೇಪಣೆಗಳ ಪರಿಶೀಲನೆ

ಬೆಳಗಾವಿ: ಜಿಲ್ಲಾ ಪಂಚಾಯತ ಅಧಿನದಲ್ಲಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯಲ್ಲಿ 6 ವರ್ಷಗಳಿಗಿಂತ ಅಧಿಕ ಸೇವೆ ಸಲ್ಲಿಸುತ್ತಿರುವ ಕರವಸೂಲಿಗಾರರ, ಕ್ಲರ್ಕ/ಕ್ಲರ್ಕ ಕಂ ಡಾಟಾ ಎಂಟ್ರಿ ಆಪರೇಟರ್‌ಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಡಿ.31 ರಂದು ಪ್ರಕಟಿಸಲಾಗಿತ್ತು. ಪ್ರಕಟಿತ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಒಟ್ಟು 78 ಆಕ್ಷೇಪಣೆಗಳು ಸ್ವೀಕೃತವಾಗಿವೆ.

ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಂಬಂಧ ಪಟ್ಟ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾ–ರಿಗಳಿಗೆ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಿದ ಗ್ರಾಮ ಪಂಚಾಯತ ಕರವಸೂಲಿಗಾರ, ಕ್ಲರ್ಕ/ಕ್ಲರ್ಕ ಕಂ ಡಾಟಾ ಎಂಟ್ರಿ ಅಪರೇಟರಗಳೊಂದಿಗೆ ಮಾ. 3 ರಂದು ಮುಂಜಾನೆ 9 ಗಂಟೆಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಹಾಜರಾಗುವಂತೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು ನಿರ್ದೇಶನ ನೀಡಿರುತ್ತಾರೆ. ಸದರಿ ದಿನದಂದು ದಾಖಲಾತಿಗಳ ಪರಿಶೀಲನೆಗೆ ಹಾಜರಾಗದೇ ಗೈರು ಹಾಜರ ಉಳಿದ ಸಿಬ್ಬಂದಿಗಳ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸೂಚನೇ ನೀಡಿದ್ದು, ದಾಖಲಾತಿಗಳ ಪರಿಶೀಲನೆಗೆ ತಪ್ಪು ಮಾಹಿತಿ ಒದಿಗಿಸಿದ್ದಲ್ಲಿ ಅಂತಹ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ಡಾ. ಜೋರಾಪೂರವರ 'ಕರ್ನಾಟಕದ ಇತಿಹಾಸ' ಕೃತಿ ಲೋಕಾರ್ಪಣೆ

ಬೆಳಗಾವಿ: ನಗರದ ನಾಡಹಬ್ಬ ಉತ್ಸವ ಸಮಿತಿ ಹಾಗೂ ಪ್ರಹ್ಲಾದ ಪ್ರಕಾಶನ ಇವರ ಸಂಯುಕ್ತ ಆಶ್ರಯದಲ್ಲಿ ಇದೇ ದಿ. 3 ರವಿವಾರದಂದು ಮಧ್ಯಾಹ್ನ 3 ಗಂಟೆಗೆ ಶಿವಬಸವನಗರದಲ್ಲಿರುವ ಎಸ್. ಜಿ. ಬಾಳೇಕುಂದ್ರಿ ತಾಂತ್ರಿಕ ಮಹಾವಿದ್ಯಾಲಯ ಸಭಾಗೃಹದಲ್ಲಿ ಹಿರಿಯ ಲೇಖಕ ಡಾ. ಸಿ. ಕೆ. ಜೋರಾಪೂರ ರಚಿಸಿದ 'ಕರ್ನಾಟಕದ ಇತಿಹಾಸ' ಒಂದು ಇಣುಕುನೋಟ ಕೃತಿ ಲೋಕಾರ್ಪಣೆ ನಡೆಯಲಿದೆ.

ಕಾರ್ಯಕ್ರಮದ ದಿವ್ಯಸಾನಿದ್ಯವನ್ನು ಗದಗದ ತೋಂಟದಾರ್ಯ ಮಠದ ಡಾ. ಪ.ಪೂ. ಸಿದ್ಧರಾಮ ಮಹಾಸ್ವಾಮಿಗಳು, ನಾಗನೂರು ರುದ್ರಾಕ್ಷಿ ಮಠದ ಪ. ಪೂ. ಡಾ. ಅಲ್ಲಮಪ್ರಭು ಮಹಾಸ್ವಾಮಿಗಳು ಮತ್ತು ಕಾರಂಜಿ ಮಠದ ಗುರುಸಿದ್ಧ ಮಹಾಸ್ವಾಮಿಗಳು ವಹಿಸಲಿದ್ದಾರೆ. ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಕಲ್ಯಾಣ ಸಚಿವೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ ಗ್ರಂಥ ಬಿಡುಗಡೆ ಮಾಡಲಿದ್ದು ಡಾ. ಎಚ್. ಬಿ. ರಾಜಶೇಖರ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಮಾಜಿ ಶಾಸಕ ಅನಿಲ ಬೆನಕೆ, ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕರಾದ ಡಾ. ಸತೀಶಕುಮಾರ ಹೊಸಮನಿ ಅತಿಥಿಗಳಾಗಿ ಆಗಮಿಸಲಿದ್ದಾರೆ. ಉಪನ್ಯಾಸಕಿ ಡಾ. ರಾಧಾ ಬಿ. ಆರ್ ಮತ್ತು ಮಹಾಂತೇಶ ವಕ್ಕುಂದ ಕೃತಿಯನ್ನು ಪರಿಚಯಿಸಲಿದ್ದಾರೆ. ನಿವೃತ್ತ ಪ್ರಾಂಶುಪಾಲ ಡಾ. ಬಸವರಾಜ ಜಗಜಂಪಿ, ಹಿರಿಯ ಪತ್ರಕರ್ತ ಎಲ್.ಎಸ್. ಶಾಸ್ತ್ರಿ, ಖ್ಯಾತ ನ್ಯಾಯವಾದಿ ಎಂ.ಬಿ. ಝಿರಲಿ ಉಪಸ್ಥಿತರಿರುತ್ತಾರೆ.

## ನೇರ ಸಂದರ್ಶನ

ಬೆಳಗಾವಿ: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಬೆಳಗಾವಿ ಇವರ ವತಿಯಿಂದ ಮಾರ್ಚ 7 ರಂದು ಹುಕ್ಕೇರಿ ತಾಲೂಕಿನ ಕಣಗಲಾದಲ್ಲಿರುವ ಗೋಲ್ಡ ಪ್ಲಸ್ ಇಂಡಸ್ಟ್ರಿಯಲ್ ಏರಿಯಾ ಆವರಣದಲ್ಲಿ ನೇರ ಸಂದರ್ಶನವನ್ನು ಆಯೋಜಿಸಲಾಗಿದೆ. ಡಿಪ್ಲೋಮಾ (ಮೆಕ್ಯಾನಿಕಲ್) 100, ಡಿಪ್ಲೋಮಾ (ಇಲೆಕ್ಟ್ರಿಕಲ್) 200 ಹಾಗೂ ಬಿಎಸ್‌ಸಿ (ಕೆಮಸ್ಟ್ರಿ) 100 ಒಟಟು 400 ಹುದ್ದೆಗಳಿಗೆ ನೇರ ಸಂದರ್ಶನವನ್ನು ಆಯೋಜಿಸಲಾಗುತ್ತಿದೆ. ಆಸಕ್ತ ಪುರುಷ ಅಭ್ಯರ್ಥಿಗಳು https://tinyurl.com/5n7jrmhn ವೆಬಸೈಟ್ ಮೂಲಕ ತಮ್ಮ ಹೆಸರುಗಳನ್ನು ನೊಂದಾಯಿಸಕೊಳ್ಳಬಹುದಾಗಿದೆ. ನೇರ ಸಂದರ್ಶನವು ಮಾರ್ಚ್ 7ರಂದು ಮುಂಜಾನೆ 10.30 ರಿಂದ ಮಧ್ಯಾಹ್ನ 1 ಗಂಟೆಯ ವರೆಗೆ ಜರುಗಲಿವೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 7975856566, ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು, ಎಂದು ಸಹಾಯಕ ನಿರ್ದೇಶಕರು, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬೆಳಗಾವಿ. ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ವಿದ್ಯುತ್ ವ್ಯತಯ

ಬೆಳಗಾವಿ: ಹೆಸ್ಕಾಂ ಉಗಾರ ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ 110 ಕೆವ್ಹಿ ವಿಧ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕೈಗೊಳ್ಳಲಾಗುತ್ತಿರುವ ಹಿನ್ನಲೆಯಲ್ಲಿ ಮಾರ್ಚ 4 ರಂದು 110 ಕಾಗವಾಡ ವಿಧ್ಯುತ್ ಉಪಕೇಂದ್ರದಿಂದ ಹೊರಡುವ ಎಲ್ಲ 11 ಕೆವ್ಹಿ ಮಾರ್ಗಗಳಿಗೆ ವಿಧ್ಯುತ್ ಸರಬರಾಜು ಇರುವುದಿಲ್ಲ.

ಉಗಾರ ಉಪವಿಭಾಗದ ವ್ಯಾಪ್ತಿಯಲ್ಲಿನ ಗ್ರಾಮಗಳಾದ ಕಾಗವಾಡ ಹಾಗೂ ಶೆಡಬಾಳ ಆರ್.ಎಸ್. ಗ್ರಾಮಗಳಲ್ಲಿ ಮುಂಜಾನೆ 9.30 ರಿಂದ ಸಾಯಂಕಾಲ 5.00 ಗಂಟೆಯವರೆಗೆ ವಿಧ್ಯುತ್ ವ್ಯತವ್ಯಯವಾಗುವದರಿಂದ ಸಾರ್ವಜನಿಕರು ಹಾಗೂ ರೈತರು ಹೆಸ್ಕಾಂ ಜೊತೆ ಸಹಕರಿಸಬೇಕೆಂದು ಹು.ವಿ.ಸ.ಕಂ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಉಗಾರ ಇವರು ವಿನಂತಿಸಿರುತ್ತಾರೆ.

# ವಿಶ್ವ ಶ್ರವಣ ದಿನಾಚರಣೆ–2024

## ಶ್ರವಣ ಸಮಸ್ಯೆ ಇರುವ ಮಕ್ಕಳು ಚಿಕಿತ್ಸೆ ಪಡೆದು ಆರೋಗ್ಯಕರ ಜೀವನ ನಡೆಸಬಹುದು: ಈರಣ್ಣ ಕಡಾಡಿ

ಬೆಳಗಾವಿ: ಮನುಷ್ಯನ ದೇಹದಲ್ಲಿ ಇರುವ ಪ್ರತಿಯೊಂದು ಅಂಗವು ಅಮೂಲ್ಯವಾದದ್ದು, ಕೆಲವು ಜನ–ರಿಗೆ ಹುಟ್ಟಿನಿಂದಲೇ ಶ್ರವಣ ಸಮಸ್ಯೆ ಹೊಂದಿದ್ದು ಈ ಬಗ್ಗೆ ಇರುವ ತಪ್ಪು ತಿಳಿವಳಿಕೆಗಳಿಂದ ಹೊರ ಬಂದು ಸರಿಯಾದ ಚಿಕಿತ್ಸೆ ಪಡೆದುಕೊಂಡಲ್ಲಿ ಶ್ರವಣ ಸಮಸ್ಯೆಯನ್ನು ಹೋಗಲಾಡಿಸಬಹುದು ಎಂದು ರಾಜ್ಯ ಸಭಾ ಸದಸ್ಯರಾದ ಈರಣ್ಣ ಕಡಾಡಿ ನುಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಬೆಳಗಾವಿ ಜಿಲ್ಲಾ ಆಸ್ಪತ್ರೆ, ಅಡಿಟೋರಿಯಂ ಸಭಾ ಭವನದಲ್ಲಿ ಶನಿವಾರ (ಮಾ.2) ರಂದು ರಾಷ್ಟ್ರೀಯ ಶ್ರವಣ ದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಸಾರ್ವಜನಿಕರ ಉತ್ತಮ ಆರೋಗ್ಯಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆರೋಗ್ಯ ಇಲಾಖೆಗೆ ಸಾಕಷ್ಟು ಅನುದಾನ ನೀಡುವದರ ಜೊತೆಗೆ ಅನೇಕ ಆರೋಗ್ಯ ಯೋಜನೆಗಳನ್ನು ಜಾರಿಗೊಳಿಸಿವೆ. ಈ ಯೋಜನೆಗಳ ಮುಖಾಂತರ ಸಾರ್ವಜನಿಕರು ತಮ್ಮ ಆರೋಗ್ಯದ ಸಮಸ್ಯೆಗಳಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು. ಸರ್ಕಾರಗಳು ಜಾರಿಗೊಳಿಸಿರುವ ಆರೋಗ್ಯ ಯೋಜನೆಯಗಳಡಿ ಶ್ರವಣ ಸಮಸ್ಯೆ ಇರುವ ಮಕ್ಕಳಿಗೆ ಚಿಕಿತ್ಸೆ ಒದಗಿಸಿ ಆರೋಗ್ಯಕರ ಜೀವನ ನಡೆಸುವಂತೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರವಣ ದೋಷ ಸಮಸ್ಯೆ ಹೊಂದಿರುವ ಮಕ್ಕಳಿಗೆ ಶ್ರವಣ ಆರೈಕೆ ಸೇವೆಗಳ ಕಿಟ್ ವಿತರಿಸಿ, ಜಿಲ್ಲೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಸರ್ಕಾರಿ ಆಸ್ಪತ್ರೆಗಳಿಗೆ ಜಿಲ್ಲಾ ಮಟ್ಟದ ಕಾಯಕಲ್ಪ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಮತ್ತು ಕಲ್ಯಾಣಾಧಿಕಾರಿ ಡಾ.ಮಹೇಶ ಕೋಣಿ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ವಿ.ವಿ.ಶಿಂಧೆ, ಬೆಳಗಾವಿ ಬಿಮ್ಸ್ ಆಸ್ಪತ್ರೆ ನಿರ್ದೇಶಕರ ಡಾ.ಅಶೋಕ ಕುಮಾರ ಶೆಟ್ಟಿ, ಬಿಮ್ಸ್ ಸ್ಥಳಿಯ ವೈದ್ಯಾಧಿಕಾರಿ ಸರೋಜಿ ಲೆಗಡಿ, ಜಿಲ್ಲಾ ಓಗಿಃಆಲಕ0 ಡಾ. ವಿವೇಕ ಹೊನ್ನಾಳಿ, ಜಿಲ್ಲಾ ಕುಷ್ಠ ರೋಗ ಅಧಿಕಾರಿ ಗೀತಾ ಕಾಂಬಳೆ, ಜಿಲ್ಲಾ ಕ್ಷಯ ರೋಗ ಅಧಿಕಾರಿ ಚಾಂದಣಿ ದೇವಡಿ ಸೇರಿದಂತೆ ಆರೋಗ್ಯ ಇಲಾಖೆ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತ–ರಿದ್ದರು. ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ. ವಿ.ಎಮ್.ಭೋಮಿ ಸ್ವಾಗತಿಸಿದರು, ಅಪರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್.ಗಡೇದ ವಂದಿಸಿದರು. ಪ್ರಭಾರಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾಜಿ ಮಾಲಗೆನ್ನವರ ಕಾರ್ಯಕ್ರಮ ನಿರೂಪಿಸಿದರು.

# ಮಾ. 4ರಂದು ಆರ್ ಕೆ ಸ್ವಾಮಿ ಲಿಮಿಟೆಡ್ ಐಪಿಓ





ಹುಬ್ಬಳ್ಳಿ: ಆರ್ ಕೆ ಸ್ವಾಮಿ ಲಿಮಿಟೆಡ್ ಮಾರ್ಚ್ 4 ರಂದು, ತಲಾ ರೂ 5 ಮುಖಬೆಲೆಯ ಈಕ್ವಿಟಿ ಷೇರುಗಳ ಇನಿಷಿಯಲ್ ಪಬ್ಲಿಕ್ ಆಫರಿಂಗ್ (ಐಪಿಓ) ತೆರೆಯಲು ಪ್ರಸ್ತಾಪಿಸಿದೆ, ಪ್ರತಿ ಈಕ್ವಿಟಿ ಷೇರಿಗೆ ರೂ 270 ರಿಂದ ರೂ 288ರವರೆಗಿಗೆ ಬೆಲೆ ನಿಗದಿಪಡಿಸಲಾಗಿದ್ದು, ಕನಿಷ್ಠ 50 ಈಕ್ವಿಟಿ ಷೇರುಗಳು ಮತ್ತು ನಂತರ 50 ಈಕ್ವಿಟಿ ಷೇರುಗಳ ಮಲ್ಟಿಪಲ್ ಗಳಲ್ಲಿ ಬಿಡ್‌ಗಳನ್ನು ಮಾಡಬಹುದಾಗಿದೆ. ಸೋಮವಾರ, ಮಾರ್ಚ್ 4, 2024ರಂದು ಚಂದಾದಾರಿಕೆಗಾಗಿ ತೆರೆಯುತ್ತದೆ ಮತ್ತು ಮಾರ್ಚ್ 6 ರಂದು ಮುಕ್ತಾಯಗೊಳ್ಳುತ್ತದೆ.

ಈ ಆಫರ್ ರೂ 1,730 ಮಿಲಿಯನ್ ವರೆಗಿನ ಒಟ್ಟುಗೂಡಿದ ಈಕ್ವಿಟಿ ಷೇರುಗಳ ತಾಜಾ ಸಂಚಿಕೆ ಮತ್ತು 8,700,000 ಈಕ್ವಿಟಿ ಷೇರುಗಳನ್ನು ಹೊಂದಿದೆ. ಶ್ರೀನಿವಾಸನ್ ಕೆ ಸ್ವಾಮಿ ಅವರಿಂದ 1,788,093 ಈಕ್ವಿಟಿ ಷೇರುಗಳನ್ನು; ನರಸಿಂಹನ್ ಕೃಷ್ಣಸ್ವಾಮಿ ಅವರಿಂದ 1,788,093 ಈಕ್ವಿಟಿ ಷೇರುಗಳು; ಈವನ್ ಸ್ಟನ್ ಪಯನಿಯರ್ ಫಂಡ್ ಎಲ್.ಪಿ. ಮೂಲಕ 4,445,714 ಈಕ್ವಿಟಿ ಷೇರುಗಳು; ಮತ್ತು ಪ್ರೇಮ್ ಮಾರ್ಕೆಟಿಂಗ್ ವೆಂಚರ್ಸ್ ಎಲ್ ಎಲ್ ಪಿ ಮೂಲಕ 678,100 ಈಕ್ವಿಟಿ ಷೇರುಗಳು ಒಳಗೊಂಡಿದೆ.

ತಾಜಾ ಸಂಚಿಕೆಯಿಂದ ಬಂದ ನಿವ್ವಳ ಆದಾಯವನ್ನು ಈ ಕೆಳಗಿನಂತೆ ಬಳಸಲು ಪ್ರಸ್ತಾಪಿಸಲಾಗಿದೆ: ಕಂಪನಿಯ ಫಂಡಿಂಗ್ ವರ್ಕಿಂಗ್ ಕ್ಯಾಪಿಟಲ್ ಅವಶ್ಯಕತೆಗಳು ರೂ. 540.00 ಮಿಲಿಯನ್, ಡಿಜಿಟಲ್ ವಿಡಿಯೋ ಕಂಟೆಂಟ್ ಪ್ರೊಡಕ್ಷನ್ ಸ್ಟುಡಿಯೋ ಸ್ಥಾಪಿಸಲು ಕಂಪನಿಯು ಮಾಡಬೇಕಾದ ಬಂಡವಾಳ ವೆಚ್ಚ ರೂ. 109.85 ಮಿಲಿಯನ್, ಕಂಪನಿಯ ಐಟಿ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಬಂಡವಾಳ ಹೂಡಿಕೆ, ಮತ್ತು ಮೆಟೀ–ರಿಯಲ್ ಸಬ್ಸಿಡಿಯರಿಗಳು, ಹಂಸ ರಿಸರ್ಚ್ ಗ್ರೂಪ್ ಪ್ರೈವೇಟ್ ಲಿಮಿಟೆಡ್ ಮತ್ತು ಹಂಸ ಕಸ್ಟಮರ್ ಇಕ್ವಿಟಿ ಪ್ರೈವೇಟ್ ಲಿಮಿಟೆಡ್ ನಲ್ಲಿ ರೂ. 333.42 ಮಿಲಿಯನ್ ಮತ್ತು ಕಂಪನಿಯ ಹೊಸ ಗ್ರಾಹಕ ಅನುಭವ ಕೇಂದ್ರಗಳು ಮತ್ತು ಕಂಪ್ಯೂಟ–ರ್ ನೆರವಿನ ದೂರವಾಣಿ ಸಂದರ್ಶನ ಕೇಂದ್ರಗಳ ಸ್ಥಾಪನೆಗೆ ಧನಸಹಾಯ ರೂ. 217.36 ಮಿಲಿಯನ್ ಮತ್ತು ಸಾಮಾನ್ಯ ಕಾರ್ಪೊರೇಟ್ ಉದ್ದೇಶಗಳು.

## ವಿಜಯಪುರ (ಬಿಜಾಪುರ) ಲೋಕ ಸಭಾಕ್ಷೇತ್ರದ ಭಾರತೀಯ ಜನತಾ ಪಾರ್ಟಿ ಪದಾಧಿಕಾರಿಗಳ ಅವಲೋಕನ ಸಭೆ



ಬೆಳಗಾವಿ: ವಿಜಯಪುರ (ಬಿಜಾಪುರ) ಲೋಕ ಸಭಾಕ್ಷೇತ್ರದ ಭಾರತೀಯ ಜನತಾ ಪಾರ್ಟಿ ಪದಾಧಿಕಾರಿಗಳು, ಮಾಜಿ ಶಾಸಕರು ಹಾಗೂ ಹಿರಿಯ ಮುಖಂಡರ ಜೊತೆ ಅವಲೋಕನ ಸಭೆ ನಡೆಸಲಾಯಿತು.

ಲೋಕ ಸಭಾಚುನಾವಣಾ ಪ್ರಯುಕ್ತಜಿಲ್ಲಾ ಹಾಗೂ ಮಂಡಳ ಪದಾಧಿಕಾರಿಗಳ ಅಭಿಪ್ರಾಯ ಸಂಗ್ರಹ ಕಾರ್ಯ ಕ್ರಮದಲ್ಲಿ ಬಿಜೆಪಿ ರಾಜ್ಯಉಪಾಧ್ಯಕ್ಷರಾದ ಅನಿಲ ಬೆನಕೆ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಪ್ರೀತಮಗೌಡ, ವಿಜಯಪುರ ಜಿಲ್ಲಾ ಅಧ್ಯಕ್ಷರಾದ ಶ್ರೀ ಆರ್. ಎಸ್. ಪಾಟೀಲ (ಕುಚುಬಾಳ) ಹಾಗೂ ರಾಜ್ಯ ಪದಾಧಿಕಾರಿಗಳು, ಜಿಲ್ಲಾ ಪದಾಧಿಕಾರಿಗಳು ಮತ್ತು ಮಂಡಳ ಪದಾಧಿಕಾರಿಗಳು ಭಾಗವಹಿಸಿದ್ದರು.

# ಭರವಸೆಗಳನ್ನು ಈಡೇರಿಸುವ ಕೆಲಸ ಮಾಡಿದ್ದೇವೆ: ದರ್ಶನಾಪುರ

ಕೆಂಭಾವಿ: ವಿರೋಧ ಪಕ್ಷದವರು ಭಾವನಾತ್ಮಕ ವಿಷ ಬೀಜ ಬಿತ್ತುವ ಕೆಲಸದ ಮೂಲಕ ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿದ್ದಾರೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಯಾವುದೇ ಯೋಜನೆಗಳು ಸ್ಥಗಿತಗೊಳಿಸುವ ಮಾತೆ ಇಲ್ಲ ಎಂದು ಯಾದಗಿರಿ ಜಿಲ್ಲಾ ಉಸ್ತುವಾರಿ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ಪಟ್ಟಣದ ಹೇಮರೆಡ್ಡಿ ಮಲ್ಲಮ್ಮ ಕಲ್ಯಾಣ ಮಂಟಪದಲ್ಲಿ ಯಾದಗಿರಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡ ವಿವಿಧ ಇಲಾಖೆಗಳ ನೂತನ ಕಟ್ಟಡಗಳ ಉದ್ಘಾಟನೆ ಹಾಗೂ ಹೋಬಳಿ ಮಟ್ಟದ ಸಾರ್ವಜನಿಕ ಅಹವಾಲು ಸ್ವೀಕಾರ ಹಾಗೂ ಇತ್ಯಾರ್ಥ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಕಾಂಗ್ರೆಸ್ ಪಕ್ಷದ ಮೇಲೆ ವಿಶ್ವಾಸವಿಟ್ಟು ಅಧಿಕಾರ ಕೊಟ್ಟಿದ್ದೀರಿ ನಮ್ಮ ಸರ್ಕಾರ ಯಾವತ್ತು ಜನಪರ ನಿಲುವನ್ನೇ ಹೊಂದಿದೆ. ಚುನಾವಣಾ ಸಂದರ್ಭದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವ ಕೆಲಸ ಮಾಡಿದ್ದೇವೆ, ಅಭಿವೃದ್ಧಿ ವಿಷಯಕ್ಕೆ ಬಂದರೆ ಪಟ್ಟಣದಲ್ಲಿ ನಮ್ಮ ಕ್ಲಿನಿಕ್, ರೈತ ಸಂಪರ್ಕ ಕೇಂದ್ರ, ನಾಡ ಕಛೇರಿ, ಶತಮಾನ ಪೂರೈಸಿದ ಪೊಲೀಸ್ ಠಾಣೆಯ ನೂತನ ಕಟ್ಟಡ, ಯಾತ್ರಿ ನಿವಾಸ ಇಂದು ಉದ್ಘಾಟನೆ ಗೊಂಡಿವೆ. ಕೆಕೆಆರ್ ಡಿಬಿ ಯೋಜನೆ ಅಡಿಯಲ್ಲಿ ಈ ಭಾಗದ ಶಾಲಾ ಕೋಣೆಗಳ ರಿಪೇರಿ ಮತ್ತು ನಿರ್ಮಾಣ ಹಾಗೂ ಶೈಕ್ಷಣಿಕ ಸೌಲಭ್ಯಕ್ಕಾಗಿ 3 ಕೋಟಿ ರೂಪಾಯಿಗಳನ್ನು ಮೀಸಲಿರಿಸಲಾಗಿದೆ. ಅಲ್ಲದೆ ಮಲ್ಲಾ ಕೆಂಭಾವಿ, ಮಾಲಹಳ್ಳಿ, ಕರಡಕಲ್ ರಸ್ತೆ ನಿರ್ಮಾಣ, ವಲಯದಲ್ಲಿ ಬರುವ ಹಳ್ಳಿಗಳಲ್ಲಿ ಸಿಸಿ ರಸ್ತೆ ನಿರ್ಮಾಣಕ್ಕೆ ಅನುದಾನ ಕಲ್ಪಿಸಲಾಗಿದೆ. ವ್ಯವಸಾಯ ಸೇವಾ ಸಹಕಾರಿ ಸಂಘಗಳ ರೈತರ ಸಾಲ ಮನ್ನಾ ಯೋಜನೆ, ಆಲ್ಹಾಳ ಗ್ರಾಮದಲ್ಲಿ 220 ಕೆವಿ ವಿದ್ಯುತ್ ವಿತರಣಾ ಕೇಂದ್ರ ಮಂಜೂರು ಮಾಡಲಾಗಿದೆ ಎಂದ ಅವರು ಪಟ್ಟಣದ ರೇವಣಸಿದ್ಧೇಶ್ವರ ದೇವಸ್ಥಾನದ ಸೇ–ರಿದಂತೆ ವಿವಿಧ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ 30 ಲಕ್ಷ ರೂಪಾಯಿ ಅನುದಾನ ಕಲ್ಪಿಸಲಾಗಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಕೆಂಭಾವಿ ವಲಯದಾದ್ಯಾಂತ ಸಾರ್ವಜನಿಕ–ರಿಂದ ಸುಮಾರು 200 ಕ್ಕೂ ಅಧಿಕ ಅಹವಾಲು ಸ್ವೀಕರಿಸಿ, ತಕ್ಷಣ ಪರಿಹಾರಕ್ಕೆ ಸಂಬಂಧ ಪಟ್ಟ ಇಲಾಖಾ ಅಧಿಕಾರಿಗಳಿಗೆ ಸೂಚಿಸಲಾಯಿತು.



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ ಸಂಗೀತಾ, ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೊಟ್ಟೆಪ್ಪಗೋಳ್, ಡಿ ಹೆಚ್ ಓ ಡಾ. ಪ್ರಭುಲಿಂಗ ಮಾನಕರ್, ಎಸಿ ಹಂಪಣ್ಣ ಸಜ್ಜನ್, ಕೃಷಿ ಜಂಟಿ ನಿರ್ದೇಶಕ ಕೆ. ಹೆಚ್ ರವಿ, ಸಹಾಯಕ ಕೃಷಿ ನಿರ್ದೇಶಕಿ ಮಂಜುಳಾ, ಮಹಿಳಾ ಮಕ್ಕಳ ಕಲ್ಯಾಣಾಧಿಕಾರಿ ಈರಣ್ಣಗೌಡ, ತಾಲೂಕು ದಂಡಾಧಿಕಾರಿ ಕೆ ವಿಜಯಕುಮಾರ, ಟಿ. ಹೆಚ್. ಓ. ಡಾ. ಆರ್‌ವಿ ನಾಯಕ್, ತಾಲೂಕು ಇಓ ಬಸವರಾಜ ಸಜ್ಜನ್, ಉಪ ತಹಸೀಲ್ದಾರ ಮಲ್ಲಿಕಾರ್ಜುನ ಪಾಟೀಲ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಪಕ್ಷದ ಹಿರಿಯ ಮುಖಂಡರು , ಸಾರ್ವಜನಿಕರು ಭಾಗವಹಿಸಿದ್ದರು.

ಬಾಕ್ಸ:

ನಮ್ಮ ಕ್ಲಿನಿಕ್, ರೈತ ಸಂಪರ್ಕ ಕೇಂದ್ರ, ನಾಡ ಕಛೇರಿ, ಶತಮಾನ ಪೂರೈಸಿದ ಪೊಲೀಸ್ ಠಾಣೆಯ ನೂತನ ಕಟ್ಟಡ, ಯಾತ್ರಿ ನಿವಾಸ ಉದ್ಘಾಟನೆ.

ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ 30 ಲಕ್ಷ ಅನುಧಾನ. ಕೆ ಕೆ ಆರ್ ಡಿಬಿ ಯೋಜನೆ ಅಡಿಯಲ್ಲಿ ಶಾಲಾ ಕೋಣೆಗಳ ರಿಪೇರಿ ಮತ್ತು ನಿರ್ಮಾಣ. ಸುಮಾರು ಎರಡು ನೂರಕ್ಕೂ ಅಧಿಕ ಅಹವಾಲು ಸ್ವೀಕಾರ.

BELAGAVI VARADI KANNADA DAILY MORNING : Editor, Printer, Publisher & Owned By : Satish Basavani Gudagenatti. Basavani House No.53, Ashray Colony Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089